ಅಧ್ಯಕ್ಷರು:- ಮಂಡಿಸಲಾಯಿತು. ಈಗ ಹೂವಿನ ಹಡಗಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಪರವಾಗಿ ಹೇಳಿಕೆ.

ಮಂತ್ರಿಗಳ ಹೇಳಿಕೆ.

ವಿಷಯ:- ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಪಟ್ಟಣದಲ್ಲಿ ಡಾ:ಅಂಬೇಡ್ಕರ್ ಮೂರ್ತಿಯನ್ನು ಭಗ್ನಗೊಳಿಸಿದ ಪ್ರಕರಣದ ಬಗ್ಗೆ.

+ ಶ್ರೀ ಎಂಃಸಿ.ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):- ಅಧ್ಯಕ್ಷರೇ 26-6-96ರಂದು ಹಡಗಲಿಯಲ್ಲಿ ಆನಂದ್ ಟಾಕೀಸ್‌ನಲ್ಲಿ ಮಧ್ಯಾಹ್ನ ಸಿನಿಮಾ ನೋಡುವಾಗ ಕಾಲು ತಗುಲಿಸಿದ ವಿಷಯದಲ್ಲಿ ಹರಿಜನರು ಮತ್ತು ಕುರುಬರು ಮತ್ತು ಇತರರ ಮಧ್ಯೆ ಗಲಾಟೆ ನಡೆಯಿತು. ಮತ್ತೆ ಅಲ್ಲಿದ್ದ ಇತರರು ಇವರನ್ನು ಸಮಾಧಾನಗೊಳಿಸಿದರು.

ದಿನಾಂಕ 27-6-96 ರಂದು ಬೆಳಗ್ಗೆ ಕರಿಬಸಪ್ಪನವರ ಹೊಟೇಲಿನಲ್ಲಿ ಮುಂದೆ, ಹೊಟೇಲ್ ಮಾಲೀಕರೊಂದಿಗೆ ಜಗಳವಾಯಿತು ಮತ್ತು ಆನಂದ್ ಟಾಕೀಸಿನ ಫಾಲಾಕ್ಷಪ್ಪನವರನ್ನೂ ಸಹ ಥಳಿಸಲಾಯಿತು.

ದಿನಾಂಕ 27-6-96ರಂದು ಸಂಜೆ 5-00 ಘಂಟೆಗೆ ತರಕಾರಿ ಅಂಗಡಿಯ ಹತ್ತಿರ ಪರಿಶಿಷ್ಟ ಜಾತಿ ಜನರು ಮತ್ತು ಸವರ್ಣೀಯರ ಮಧ್ಯೆ ಗಲಾಟೆ ನಡೆದು, ಅಲ್ಲಿದ್ದ ಕೆಲವರು ಹುಡುಗರನ್ನು ಸಮಾಧಾನಪಡಿಸಿ ಕಳುಹಿಸಿಕೊಟ್ಟಿರುತ್ತಾರೆ. ಅದೇ ದಿನ ಸಂಜೆ ಗಡಗಿ ವೀರಣ್ಣನವರ ನೇತೃತ್ವದಲ್ಲಿ ಸುಮಾರು 40-50 ಸವರ್ಣೀಯ ಗುಂಪು ಗಲಾಟೆ ಮಾಡಿ ಹರಿಜನ ಕೇರಿ ಕಡೆಗೆ ನುಗ್ಗುತ್ತಿರುವಾಗ, ಸ್ಥಳೀಯ ಪೊಲೀಸರು ತಡೆಯಲು ಪ್ರಯತ್ನಿಸಿದಾಗ, ಈ ಗುಂಪು ಅದೇ ಸ್ಥಳದಲ್ಲಿದ್ದ ಅಂಬೇಡ್ಕರ್ ಸಂಘದ ಕಟ್ಟಡವನ್ನು ಧ್ವಂಸಗೊಳಿಸಿದರು. ಈ ಮಧ್ಯೆ ಮತ್ತೊಂದು ಗುಂಪು ವೃತ್ತದ ಮಧ್ಯದಲ್ಲಿನ ಡಾ:ಅಂಬೇಡ್ಕರ್ ಪ್ರತಿಮೆಯನ್ನು ಜಖಂಗೊಳಿಸಿದರು. ಈ ಕೃತ್ಯವು ಎರಡು ಗುಂಪಿನ ಮಧ್ಯೆ ಜಗಳಕ್ಕೆ ಕಾರಣವಾಗಿ ಪೊಲೀಸರ ಮಧ್ಯಸ್ಥಿಕೆಯಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಸದರಿ ಘಟನೆಯಲ್ಲಿ ಪರಿಶಿಷ್ಟ ವರ್ಗದ ಜನರಾದ ಮೈಲಾರಪ್ಪ ಮತ್ತು ನಾಗರಾಜ ಎಂಬುವವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅವರಿಗೆ ಸೂಕ್ತ ಚಿಕಿತ್ಸೆ ನೀಡಲಾಯಿತು. ಈ ಪ್ರಕರಣದಲ್ಲಿ ದಲಿತ ಸಂಘರ್ಷ ಸಮಿತಿಯವರು ನೀಡಿದ ದೂರಿನ ಮೇಲೆ ದಿನಾಂಕ 28-6-96ರಂದು ಹಡಗಲಿಯಲ್ಲಿ ಪೊಲೀಸ್ ಠಾಣೆಯಲ್ಲಿ ಐ.ಪಿ.ಸಿ 143, 147 ಮತ್ತು ಇತರೆ ಕಲಮುಗಳ ಅಡಿಯಲ್ಲಿ ಕೇಸು ದಾಖಲು ಪಡಿಸಿದ್ದು, ಮುಂದೆ ಪ್ರಕರಣವು ವಿಚಾರಣೆಯಲ್ಲಿದೆ. ಅಪರಾಧಿಗಳನ್ನು ದಸ್ತಗಿರಿ ಮಾಡಿ ಬಳ್ಳಾರಿ ವಿಶೇಷ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದ್ದು, ದಿನಾಂಕ 11-7-96ರವರೆಗೆ ನ್ಯಾಯಾಲಯ ಬಂಧನದಲ್ಲಿರಲು ಸದರಿ ನ್ಯಾಯಾಲಯವು ಆದೇಶಿಸಿದೆ. ಅಪರಾಧಿಗಳನ್ನು ಜಾಮೀನಿನ ಮೇಲೆ ನ್ಯಾಯಾಲಯವು ಬಿಡುಗಡೆ ಮಾಡಿದೆ ಮತ್ತು ಈ

ಪ್ರಕರಣದ ತನಿಖೆಯನ್ನು ಈಗಾಗಲೇ ಸಿ.ಒ.ಡಿ.ಗೆ ವಹಿಸಲು ಆದೇಶ ನೀಡಲಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಅಧೀಕ್ಷಕರು, ಬಳ್ಳಾರಿ ಇವರು ಪರಿಶಿಷ್ಟ ವರ್ಗದ ಮುಖಂಡರೊಡನೆ ಚರ್ಚಿಸಿ ಪರಿಹಾರ ಕಾರ್ಯಕೈಗೊಂಡಿರುತ್ತಾರೆ. ಅಂಬೇಡ್ಕರ್ ಕಟ್ಟಡವನ್ನು ದುರಸ್ಥಿಗೊಳಿಸಲು ಜಿಲ್ಲಾಪರಿಷತ್ ಇಂಜಿನಿಯರಿಂಗ್ ಇಲಾಖೆಗೆ ಆದೇಶ ನೀಡಲಾಗಿದೆ. ಹೊಸದಾಗಿ ಪ್ರತಿಮೆಯನ್ನು ತಯಾರಿಸಲು ಈಗಾಗಲೇ ಸ್ಥಳೀಯ ಶಿಲ್ಪಿಗೆ ವಹಿಸಿಕೊಡಲಾಗಿದೆ. ಈ ಸಂಬಂಧ ರೂ. 18,000-00 ಮುಂಗಡ ಹಣವನ್ನು ಜಿಲ್ಲಾಪರಿಷತ್‌ಗೆ ಬಿಡುಗಡೆ ಮಾಡಲಾಗಿದೆ.

ಹಡಗಲಿ ಪಟ್ಟಣದಲ್ಲಿ ಸೂಕ್ತ ಬಂದೋಬಸ್ತು ವ್ಯವಸ್ಥೆ ಮುಂದುವರೆದಿದ್ದು, ಈಗ ಪರಿಸ್ಥಿತಿ ಶಾಂತವಾಗಿರುತ್ತದೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾನು ಮೂರ್ನಾಲ್ಕು ದಿವಸಗಳಿಂದ ಪ್ರಸ್ತಾಪಿಸಬೇಕೆಂದು ತಮ್ಮಲ್ಲಿ ಪದೇ ಪದೇ ಕೇಳಿಕೊಂಡೆ. ಆದರೆ, ಬೇರೆ ವಿಷಯಗಳಿದ್ದ ಕಾರಣ ಸದರಿ ವಿಷಯವನ್ನು ಮುಂದೂಡುವಂತಾಯಿತು. ಈ ದಿವಸ ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ಸದರಿ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದರಿಂದ ತಮಗೆ ನಾನು ಅಭಿನಂದಿಸುತ್ತೇನೆ. ಈಗ ಇಲ್ಲಿರುವ ಪ್ರಶ್ನೆ ಇಷ್ಟೆ : ದಿನಾಂಕ 27.6.96ರಂದು ಐದು ಗಂಟೆಗೆ ಈ ತಕರಾರು ನಡೆಯಿತು. ತಕರಾರು ನಡೆದ ನಂತರವೂ ಕೂಡ ಪೊಲೀಸರು ಯಾವುದೇ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಏಕೆಂದರೆ, ಹರಿಜನವಾಡಕ್ಕೆ ರಾತ್ರಿ ನೂರಾರು ಸಂಖ್ಯೆಯಲ್ಲಿ ಜನರು ನುಗ್ಗಿ ಅಲ್ಲಿರುವ ಡಾ: ಅಂಬೇಡ್ಕರ್ ಭವನ ಕಟ್ಟಡವನ್ನು ಧ್ವಂಸಗೊಳಿಸಿರಬೇಕಾದರೆ ಕಟ್ಟಡವನ್ನು ಧ್ವಂಸಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ? ಅದು ಅರ್ಧ ಗಂಟೆಯಲ್ಲಿ ಮುಗಿಯತಕ್ಕಂಥ ಕೆಲಸವಲ್ಲ, ಕಟ್ಟಡವನ್ನು ಧ್ವಂಸಗೊಳಿಸಲು ಐದಾರು ಗಂಟೆಗಳಾದರೂ ಆಗಿರಬಹುದು. ಅಷ್ಟೊತ್ತಿನವರೆವಿಗೂ ಧ್ವಂಸಗೊಳಿಸುತ್ತಿರಬೇಕಾದರೆ ಪೊಲೀಸರು ಏನು ಮಾಡುತ್ತಿದ್ದರು? ಎರಡನೆಯದಾಗಿ, ಇಂತಹ ಘಟನೆಯನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಅಲ್ಲಿನ ಮುನಿಸಿಪಾಲಿಟಿಯ ಅಧ್ಯಕ್ಷರು ಘಟನೆಗೆ ಮುಖ್ಯ ಕಾರಣಕರ್ತರೆಂಬ ಅಭಿಪ್ರಾಯವಿದೆ. ಮೂರನೆಯದಾಗಿ, ಅಲ್ಲಿನ ಸ್ಥಳೀಯ ಶಾಸಕರಾದ ಶ್ರೀ ಎಂ.ಪಿ.ಪ್ರಕಾಶ್‌ರುವರು ಮಂತ್ರಿಗಳಾಗಿದ್ದು ನೇರವಾಗಿ ಅವರ ಕುಮ್ಮಕ್ಕಿನಿಂದಾಗಲೀ ಅಥವಾ ಅವರ ಸಹಾಯ, ಬೆಂಬಲದಿಂದಾಗಲೀ ಈ ಘಟನೆ ನಡೆದಿದೆಯೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ರಾಜಕೀಯ ದುರುದ್ದೇಶವಿಟ್ಟುಕೊಂಡು ನಾನು ಯಾವುದೇ ರೀತಿಯ ಆಪಾದನೆ ಮಾಡುವುದಿಲ್ಲ. ಆದರೆ, ಅಲ್ಲಿನ ಮುನಿಸಿಪಾಲಿಟಿಯ ಅಧ್ಯಕ್ಷರು, ಅವರ ಸಂಬಂಧಿಕರೆಲ್ಲರೂ ಕೂಡ ನೇರವಾಗಿ ಸಚಿವರಾದ ಎಂ.ಪಿ.ಪ್ರಕಾಶ್‌ರವರಿಗೆ ಗೊತ್ತು ಮತ್ತು ಅವರೆಲ್ಲರೂ ಇವರ ಪಕ್ಷದಲ್ಲಿದ್ದಾರೆ ಎಂಬ ಮಾಹಿತಿ ನಮಗೆ ಬಂದಂಥ ಸುದ್ದಿಯಲ್ಲಿ ಸಿಕ್ಕಿದೆಯೆಂದಾಗ ಇಂತಹ ಕೃತ್ಯಗಳನ್ನೆಸಗುವ ಅಧ್ಯಕ್ಷರ ಮೇಲೆ ಮೊದಲೇ

ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಮತ್ತು ನಂತರ ಅಂತಹ ಅಧ್ಯಕ್ಷರಿಗೆ ಇಂತಹ ಕೃತ್ಯಗಳನ್ನೆಸಗಲು ನೀವು ಅವಕಾಶ ಮಾಡಿಕೊಡಬಾರದು. ಯಾರು ಬಡ ಜನರ ವಿರುದ್ಧ ಕೆಲಸ ಮಾಡುತ್ತಾರೋ, ಅಥವಾ ದಲಿತರ ವಿರುದ್ಧವಾಗಿ ಕೆಲಸ ಮಾಡುತ್ತಾರೋ ಅಂತಹವರಿಗೆ ಉನ್ನತ ಸ್ಥಾನಗಳಿಗೆ ನೇಮಿಸಿದರೆ ಅವರು ಸರ್ಕಾರದ ಹೆಸರನ್ನು ಕೆಡಿಸುತ್ತಾರೆ ಮತ್ತು ಸಮಾಜದಲ್ಲಿರುವ ಶಾಂತಿಗೆ ಕೂಡ ಭಂಗ ತರುತ್ತಾರೆ ಹಾಗೂ ಅವರ ಬಗ್ಗೆ ನೀವು ಜಾಗೃತರಾಗಿರಬೇಕಾಗುತ್ತದೆ. ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲದೆ, ಪೊಲೀಸ್ ಇಲಾಖೆ ಕೂಡ ಬಹಳ ಸೌಮ್ಯವಾದ ದಿಕ್ಕಿನಲ್ಲಿ ಹೋಗಿದೆ. ಅಲ್ಲಿನ ಪೊಲೀಸರ ನಿರ್ಲಕ್ಷ್ಯತನದಿಂದ ಘಟನೆ ಇಷ್ಟು ದೊಡ್ಡದಾಗಿ ಬೆಳೆದಿದೆ. ಸಿನಿಮಾ ಥಿಯೇಟರಿನಲ್ಲಿ ನಡೆದಂಥ ಒಂದು ಸಣ್ಣ ಘಟನೆ ಬಗ್ಗೆ ಸ್ಥಳದಲ್ಲೇ ಪೊಲೀಸರು ಮಧ್ಯಸ್ಥಿಕೆ ವಹಿಸಿ ಪ್ರಕರಣವನ್ನು ಅಲ್ಲಿಗೆ ಸಮಾಪ್ತಿಗೊಳಿಸಿದ್ದರೆ ಬಹುಶಃ ಮುಂದೆ ಇಷ್ಟೊಂದು ಬೆಳೆದು ಎಲ್ಲಾ ಜನರು ಸೇರಿ ಹರಿಜನವಾಡಕ್ಕೆ ನುಗ್ಗಿ ಅಲ್ಲಿರುವ ಡಾ:ಅಂಬೇಡ್ಕರ್ ಭವನವನ್ನು ಧ್ವಂಸಗೊಳಿಸತಕ್ಕಂಥಾದ್ದು ಮತ್ತು ಅಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿದ್ದ ಡಾ: ಅಂಬೇಡ್ಕರ್ ಪುತ್ಥಳಿಯನ್ನು ವಿದ್ವಸ್ಥಗೊಳಿಸುವಂಥ ಕೆಲಸ ಮಾಡುತ್ತಿರಲಿಲ್ಲ. ಈ ಪ್ರಕರಣದಲ್ಲಿ ಪೊಲೀಸರು ತಮ್ಮ ನಿರ್ಲಕ್ಷ್ಯತನವನ್ನು ನೇರವಾಗಿ ತಾಳಿದ್ದಾರೆ ಮತ್ತು ಉಳಿದಂತಹುದು ಏನು ಲುಕ್ಸಾನು ಆಗಿದೆ, ಸುಮಾರು ಹದಿನೆಂಟು ಸಾವಿರ ರೂಪಾಯಿಗಳ ಮೌಲ್ಯದ ಪ್ರತಿಮೆಯೆಂದು ಹೇಳಿದ್ದೀರಿ. ಈಗ ಪುನಃ ಎಂತಹ ಪ್ರತಿಮೆಯೆಂದರೆ, ಪ್ಲಾಸ್ಟರ್ ಆಫ್ ಪ್ಯಾರಿಸ್ ಆಗಲಿ, ಸಿಮೆಂಟ್‌ನಿಂದ ತಯಾರಿಸಿದ ಪ್ರತಿಮೆಯಾಗಲಿ ಯಾವುದಾದರೊಂದನ್ನು ಸ್ಥಾಪಿಸುತ್ತೀರಿ. ಅದಕ್ಕೆ ಮತ್ತೆ ನಾಳೆ ಯಾರಾದರೂ ಒಂದು ಕಲ್ಲು ಹೊಡೆದರೆ ಅಂಥದ್ದೇ ಘಟನೆಗಳು ಪುನಃ ಮರುಕಳಿಸುತ್ತದೆ. ಅದಕ್ಕೋಸ್ಕರ ಸರ್ಕಾರಕ್ಕೆ ನನ್ನ ಮನವಿಯೇನೆಂದರೆ ಪ್ರತಿಮೆಗಳನ್ನು ಅಂತಹ ಕಡೆ ಸ್ಥಾಪಿಸಬೇಕೆಂದಾಗ ಕಂಚಿನ ಲೋಹದಲ್ಲಿ ತಯಾರಾದ ಪುತ್ಥಳಿಯನ್ನು ಸ್ಥಾಪಿಸಿ, ಇಲ್ಲವಾದರೆ ಎಲ್ಲಿಯೂ ಕೂಡ ಪ್ರತಿಮೆಗಳನ್ನು ಸ್ಥಾಪಿಸಲು ಅವಕಾಶ ಕೊಡಬೇಡಿ. ಇವೊತ್ತು ಪ್ರತಿಮೆಗಳನ್ನು ಸ್ಥಾಪಿಸುತ್ತಿರುವುದರಿಂದ ಅನೇಕ ಕಡೆಗಳಲ್ಲಿ ಘರ್ಷಣೆಗೆ ಕಾರಣಗಳಾಗುತ್ತಿವೆ. ಬರೀ ಡಾ: ಅಂಬೇಡ್ಕರ್ ಪ್ರತಿಮೆ ಒಂದೇ ಅಲ್ಲ, ನಮ್ಮ ಬೀದರ್, ಗುಲ್ಬರ್ಗ ಜಿಲ್ಲೆಯ ಭಾಗಗಳಲ್ಲಿ ಪ್ರತಿಯೊಂದು ವೃತ್ತದಲ್ಲೂ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ಒಂದೆಡೆ ಬಸವೇಶ್ವರರ ಪ್ರತಿಮೆ ಇದ್ದರೆ, ಇನ್ನೊಂದೆಡೆ ಡಾ:ಅಂಬೇಡ್ಕರ್‌ರವರ ಪ್ರತಿಮೆ, ಮತ್ತೊಂದೆಡೆ ಶಿವಾಜಿಯ ಪ್ರತಿಮೆ, ನಂತರ ಹೊಸ ಹೊಸ ಪುತ್ಥಳಿಗಳು ಸ್ಥಾಪನೆಗೊಳ್ಳುತ್ತಿವೆ. ಪ್ರತಿಮೆಗಳನ್ನು ಸ್ಥಾಪಿಸಲು ಲೋಕೋಪಯೋಗಿ ಇಲಾಖೆಯ ಅನುಮತಿ ಇರುವುದಿಲ್ಲ, ಸರ್ಕಾರದ ಅನುಮತಿಯೂ ಇರುವುದಿಲ್ಲ ಅಥವಾ ಸ್ಥಾಪಿಸುವಾಗಲೂ ಉತ್ತಮವಾದ ಪ್ರತಿಮೆಯನ್ನು ಸ್ಥಾಪಿಸುವುದಿಲ್ಲ. ಇದರ ಬಗ್ಗೆ ಸರ್ಕಾರ ಏನಾದರೊಂದು ಕ್ರಮ ಜರುಗಿಸಬೇಕು. ಈಗ ಪ್ರತಿಮೆಗಳನ್ನು ಸ್ಥಾಪಿಸಬೇಕೆಂದಿದ್ದರೆ ಪಂಚಲೋಹದಿಂದ ಮಾಡಿದ, ಇಲ್ಲವೇ ಕಂಚಿನ ಪ್ರತಿಮೆಗಳನ್ನು ಸ್ಥಾಪಿಸಿದಲ್ಲಿ ನಾಳೆ ದಿವಸ ಕಿಡಿಗೇಡಿಗಳು ಅದನ್ನು

ಧ್ವಂಸಗೊಳಿಸುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ, ಸಿಮೆಂಟ್‌ನಿಂದ ತಯಾರಿಸಿದ ಪ್ರತಿಮೆಯನ್ನು ಸ್ಥಾಪಿಸಿದರೆ, ಆ ಪ್ರತಿಮೆಗೆ ಸ್ವಲ್ಪ ಹೆಚ್ಚು ಕಡಿಮೆಯಾದರೆ ಮತೀಯ ಘರ್ಷಣೆಗಳು ಪ್ರಾರಂಭವಾಗುತ್ತವೆ ಅಥವಾ ಜನರೇ ಮತೀಯ ಘರ್ಷಣೆಗಳಾಗಲು ಪ್ರಚೋದಿಸುತ್ತಾರೆ ಇಲ್ಲವೇ ರಾಜಕೀಯ ದುರುದ್ದೇಶವಿಟ್ಟುಕೊಂಡು ಪ್ರಚೋದಿಸತಕ್ಕಂಥವರು ಇರುತ್ತಾರೆ. ಆದುದರಿಂದ, ಇದನ್ನು ತಾವು ಪುನರ್ ಪರಿಶೀಲಿಸಿ, ಅಲ್ಲಿ ಕಂಚಿನ ಪ್ರತಿಮೆಯನ್ನು ಮರು ಸ್ಥಾಪಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಅಲ್ಲಿ ಡಾ:ಅಂಬೇಡ್ಕರ್ ಕಲ್ಯಾಣ ಮಂಟಪವನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ, ಇನ್ನೂ ಅದು ಕಾರ್ಯಗತವಾಗಲಿಲ್ಲ. ಆದರೆ, ಅಲ್ಲಿ ಇಂತಹ ಘಟನೆಯಾಗಲು ಸಂಪೂರ್ಣ ಕಾರಣವೇನು? ಇದರ ಹಿನ್ನೆಲೆಯೇನು? ಸಿನಿಮಾ ಥಿಯೇಟರ್‌ನಲ್ಲಿ ಒಬ್ಬ ಹರಿಜನ ಹುಡುಗನನ್ನು ಸವರ್ಣೀಯ ಹುಡುಗ ಕಾಲಿನಿಂದ ಒದ್ದನು ಎಂಬ ಹಿನ್ನೆಲೆಯಿಂದಲ್ಲ ಸಿನಿಮಾ ಥಿಯೇಟರಿನಲ್ಲಿ ಅವರಿಬ್ಬರೇ ಜಗಳವಾಡಿಕೊಂಡು, ಕಚ್ಚಾಡಿಕೊಂಡು ಕಡೆಗೆ ಸುಮ್ಮನಾಗುತ್ತಿದ್ದರು. ಆದರೆ, ಆತ ಜನರ ಗುಂಪು ಕಟ್ಟಿಕೊಂಡು ಓಣಿಗೆ ಹೋಗಿ ಹರಿಜನ ಹುಡುಗನ ಮೇಲಿದ್ದ ತನ್ನ ಸಿಟ್ಟನ್ನು ಅಂಬೇಡ್ಕರ್ ಪ್ರತಿಮೆಯನ್ನು ಉದ್ವಸ್ಥಗೊಳಿಸುವ ಮೂಲಕ ತೀರಿಸಿಕೊಳ್ಳಬೇಕಾದಂಥ ಅವಶ್ಯಕತೆಯಿರಲಿಲ್ಲ. ಇದಕ್ಕೆ ಹಿನ್ನೆಲೆ ಏನಿದೆಯೆಂದರೆ, ನನಗೆ ಗೊತ್ತಿರುವಂತೆ ಅಲ್ಲಿನ ಕೆಲವು ಸ್ಥಳೀಯ ಮುಖಂಡರು ಹೇಳಿರುವ ಪ್ರಕಾರ ಆ ಊರಿನಲ್ಲಿ ಪ್ರತಿ ವರ್ಷವೂ ಊರಮ್ಮನ ಜಾತ್ರೆಯನ್ನು ನೆರವೇರಿಸುತ್ತಾರೆ. ಜಾತ್ರೆಯಲ್ಲಿ ಕೋಣವನ್ನು ಕುಯ್ಯಲು ನೀವು ಬರಬೇಕೆಂದು ಸವರ್ಣೀಯರು ಹರಿಜನರನ್ನು ಕೇಳಿಕೊಂಡಾಗ, ಅವರು 'ನಾವು ದೇವರ ಮುಂದೆ ಕೋಣ ಕುಯ್ಯುವ ವೃತ್ತಿಯನ್ನು ಬಿಟ್ಟು ಬಿಟ್ಟಿದ್ದೇವೆ, ಆ ಕೆಲಸಕ್ಕೆ ನಾವು ಈಗ ಕೈಹಾಕುವುದಿಲ್ಲ' ವೆಂದು ತಿರಸ್ಕರಿಸಿದ ನಂತರ ಅವರಿಗೂ ಸವರ್ಣೀಯರಿಗೂ ಅಲ್ಲಿಂದ ಈ ಘಟನೆಯಾಗುವರೆಗೆ ವೈಮನಸ್ಸು ಬೆಳೆದು ಬಂದು ಸಿನಿಮಾ ಥಿಯೇಟರಿನಲ್ಲಿ ಕಾಲಿನಂದ ಒದ್ದ ಎಂಬುದೇ ಒಂದು ನೆಪವಾಗಿ ಜಗಳ ಪ್ರಾರಂಭವಾದಾಗ ಅವರಿಬ್ಬರನ್ನು ಹೊಡೆದವನಿಗೂ, ಹೊಡೆಸಿಕೊಂಡವನಿಗೂ ಲಾಕಪ್‌ನಲ್ಲಿ ಹಾಕಿ ಸ್ವಲ್ಪ ಶಿಕ್ಷೆಕೊಟ್ಟಿದ್ದರೆ ಈ ಘಟನೆಯಾಗುವ ಪ್ರಶ್ನೆಯೇ ಬರುತ್ತಿರಲಿಲ್ಲ ಮತ್ತು ಸಾವಿರಾರು ಸಂಖ್ಯೆಯಲ್ಲಿ ಜನರು ಹರಿಜನವಾಡಾಕ್ಕೆ ನುಗ್ಗತಕ್ಕಂಥ ಅವಶ್ಯಕತೆಯೂ ಇರಲಿಲ್ಲ. ಇದಕ್ಕೆ ಸಮಗ್ರವಾದ ಹಿನ್ನೇಲೆಯೇನು? ಸಾಮಾಜಿಕ ಹಿನ್ನೆಲೆಯಿಂದ ಬಂದಂಥ ಪ್ರಕರಣ ಇದಾಗಿರುವುದರಿಂದ ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು ಮತ್ತು ಇದರಲ್ಲಿ ಯಾವ ರಾಜಕಾರಣಿಗಳು ಭಾಗಿಯಾಗಿದ್ದಾರೆ? ಘಟನೆಗೆ ಕುಮ್ಮಕ್ಕು ಕೊಟ್ಟಿದ್ದಾರೆಯೇ ಎಂಬುದರ ಬಗ್ಗೆ ನಿಷ್ಪಕಪಾತವಾಗಿ ತನಿಖೆಯಾಗಬೇಕು. ಇದರ ಬಗ್ಗೆ ಜ್ಯುಡಿಷಿಯಲ್ ಪ್ರೋಬ್ ಮಾಡಬೇಕು ಇಲ್ಲವೇ ಪ್ರಕರಣದ ತನಿಖೆಗಾಗಿ ಸಿ.ಬಿ.ಐ.ಯವರಿಗೆ ವಹಿಸಿಕೊಡಿ. ಸಿ.ಓ.ಡಿ.ಗೆ ವಹಿಸಿದರೆ ಏನಾಗುತ್ತದೆಂದರೆ ಈ ಸಂಸ್ಥೆ ಸರ್ಕಾರದ ಹತೋಟಿಯಲ್ಲಿರುವ ಕಾರಣ ಮತ್ತು ಪ್ರಸ್ತುತ ಘಟನೆಗೆ ಕಾರಣರಾಗಿರುವ ಅಲ್ಲಿನ ಮುನಿಸಿಪಾಲಿಟಿ ಅಧ್ಯಕ್ಷರು ಮತ್ತವರ ಸಂಘಟಕರು ಪ್ರಭಾವಶಾಲಿಯಾಗಿರುವ ಕಾರಣ

ಪ್ರಕರಣವನ್ನು ತನಿಖೆಗಾಗಿ ಸಿ.ಓ.ಡಿ.ಗೆ ವಹಿಸಿದರೆ ನಿಷ್ಪಕ್ಷಪಾತವಾಗಿ ತನಿಖೆ ಆಗುವುದಿಲ್ಲವಾದ್ದರಿಂದ ನ್ಯಾಯಾಂಗ ತನಿಖೆ ಮಾಡಿಸಬೇಕು ಇಲ್ಲವೆಂದರೆ ಸಿ.ಬಿ.ಐ.ಗೆ ಪ್ರಕರಣವನ್ನು ರೆಫರ್ ಮಾಡಿ ಅವರು ತನಿಖೆ ಮಾಡಿ ಏನು ವರದಿ ಕೊಡುತ್ತಾರೋ ಅಲ್ಲಿಯವರೆಗೆ ಕಾಯೋಣ. ತಮಗೆ ಇನ್ನೊಂದು ಸಲಹೆ ಕೊಡುವುದೇನೆಂದರೆ, ಅಲ್ಲಿನ ವಾಸ್ತವಾಂಶ ತಿಳಿಯುವುದಕ್ಕೋಸ್ಕರ ಒಂದೆಡೆ ಜ್ಯುಡಿಷಿಯಲ್ ಪ್ರೋಬ್ ಮತ್ತೊಂದೆಡೆ ಸಿ.ಬಿ.ಐ.ಗೆ ರೆಫರ್ ಮಾಡತಕ್ಕಂಥಾದ್ದು. ಎರಡನೆಯದಾಗಿ, ವಿಧಾನಮಂಡಲದ ಪರಿಶಿಷ್ಟ ಜಾತಿ ವರ್ಗಗಳ ಕಲ್ಯಾಣ ಸಮಿತಿ ಮತ್ತು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖಾ ಸಮಿತಿ ಏನಿವೆ, ಈ ಸಮಿತಿಗಳು ಕೂಡ ಘಟನೆ ನಡೆದ ಸ್ಥಳಕ್ಕೆ ಭೇಟಿಯಿತ್ತು ಅಲ್ಲಿ ವಾಸ್ತವಾಂಶ ಏನಿದೆಯೆಂಬುದನ್ನು ಅಧ್ಯಯನ ಮಾಡಿಕೊಂಡು ಬರಲಿ ಮತ್ತು ಕ್ರಿಮಿನಲ್ ಕೇಸಿಗೆ ಸಂಬಂಧಿಸಿದಂತೆ ನೀವು ನೇರವಾಗಿ ಸಿ.ಬಿ.ಐ.ಗೆ ಮತ್ತು ಜುಡಿಷಿಯಲ್ ಪ್ರೋಬ್ ಇವೆರಡರಲ್ಲಿ ಒಂದಕ್ಕೆ ತಾವು ಪ್ರಕರಣವನ್ನು ವಹಿಸಿದ ನಂತರ ತನಿಖೆಗಾಗಿ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ನೇಮಿಸಿ, ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಿ ಹಣ ಖರ್ಚು ಮಾಡಿ ಎಂದು ಹೇಳುವುದಿಲ್ಲ. ಇವೊತ್ತು ಜಿಲ್ಲಾ ಮ್ಯಾಜಿಸ್ಟ್ರೇಟರು ಕೂಡ ಪವರ್‌ಫುಲ್ ಆಗಿ ಕೆಲಸ ಮಾಡುತ್ತಿದ್ದಾರೆ. ದೇಶದಲ್ಲಿ ದೊಡ್ಡ ದೊಡ್ಡ ಹಗರಣಗಳಾದ ಹವಾಲ.... ಮುಂತಾದ ಪ್ರಕರಣಗಳ ತನಿಖೆಗಾಗಿ ಜಿಲ್ಲಾ ನ್ಯಾಯಾಧೀಶರನ್ನು ಮತ್ತು ಸಿವಿಲ್ ಜಡ್ಜ್‌ಗಳನ್ನು ನೇಮಿಸುತ್ತಿದ್ದಾರೆ. ಅದಕ್ಕೋಸ್ಕರ ಪ್ರಸ್ತುತ ರಾಜ್ಯದಲ್ಲಿ ನಡೆದಿರುವ ಘಟನೆಯ ತನಿಖೆಗಾಗಿ ಜ್ಯುಡಿಷಿಯಲ್ ಪ್ರೋಬ್ ಮತ್ತು ಸಿ.ಬಿ.ಐ., ಇವೆರಡರಲ್ಲಿ ಯಾವುದಾದರೊಂದರ ಮೂಲಕ ತನಿಖೆ ನಡೆಸಲು ತಾವು ಒಪ್ಪಿಕೊಳ್ಳಬೇಕು. ಇದರಲ್ಲಿ ಪ್ರತಿಷ್ಠೆ ಪ್ರಶ್ನೆಯಾಗಲಿ ಅಥವಾ ಇಂತಹ ಮೂಲದಿಂದಲೇ ತನಿಖೆಯಾಗಬೇಕೆಂದು ನಾವು ಹಠ ಹಿಡಿದು, ನಾನು ಇಲ್ಲಿ ನಿಂತು ಹೇಳುತ್ತಿಲ್ಲ. ಏಕೆಂದರೆ, ಇಂತಹ ಘಟನೆಗಳು ಎಲ್ಲಾ ಕಡೆಗಳಲ್ಲೂ ನಡೆದಿದೆ. ನಾವು ಪದೇ ಪದೇ ನಿಂತು ಕೇಳುವುದರಿಂದ 'ಇಂತಹ ವಿಷಯಗಳು ಬಂದಾಗ ಇವರು ಯಾವಾಗಲೂ ಇದನ್ನೇ ಕೇಳುತ್ತಾರೆ' ಎನ್ನುವ ಭಾವನೆ ಸರ್ಕಾರಕ್ಕೆ ಬರಬಾರದು, ಯಾವಾಗ ಈ ರೀತಿಯ ಶೋಷಣೆಯಾಗುತ್ತದೋ, ಇದರ ಬಗ್ಗೆ ಕೇಳುವ ಹಕ್ಕು ನಮಗಿದೆ. ನಿಮ್ಮದು ಸಾಮಾಜಿಕ ನ್ಯಾಯವನ್ನು ಕೊಡುವ ಸರ್ಕಾರವಾಗಿರುವುದರಿಂದ ಸರ್ಕಾರ ಇದಕ್ಕೆ ಸ್ಪಂದಿಸಬೇಕು. ಈ ಘಟನೆ ಹಿಂದಿರುವ ಹಿನ್ನೆಲೆ ಏನು? ಎಂಬುದು ತನಿಖೆಯಿಂದ ಬಹಿರಂಗವಾಗಿ ಬರುತ್ತದೆ. ಆದುದರಿಂದ, ಘಟನೆಯ ತನಿಖೆಗಾಗಿ ಜ್ಯುಡಿಷಯಲ್ ಪ್ರೋಬ್ ಇಲ್ಲವೇ ಸಿ.ಬಿ.ಐ.ನಿಂದ ತನಿಖೆ ಮಾಡಿಸಿ. ಇತರೆ ವರದಿಗಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮಿತಿಯವರನ್ನೂ ಜೊತೆಯಲ್ಲಿ ಕಳಿಸಿ. ಅದಕ್ಕೆ ಅವರು ಸ್ಪಂದಿಸುತ್ತಾರೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

+ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರು ಇದರ ಬಗ್ಗೆ ಹೇಳಿದ್ದರೂ ನಾನು ಆ ಕ್ಷೇತ್ರದ ಶಾಸಕನಾಗಿರುವುದರಿಂದ ತಮ್ಮ ಅಪ್ಪಣೆಯನ್ನು ಪಡೆದು ಕೆಲವು ವಿವರಣೆಗಳನ್ನು

ಸದನಕ್ಕೆ ಮಾಹಿತಿ ದೊರಕಿಸುವುದಕ್ಕಾಗಿ ಹೇಳುತ್ತೇನೆ. 26ಮತ್ತು 27ನೇ ತಾರೀಖಿನಂದು ಆಗಿರುವ ಘಟನೆಗಳ ಬಗ್ಗೆ ಸರ್ಕಾರವೇನು ಮಾಹಿತಿ ಕೊಟ್ಟಿದೆ. ಅದು ಸಂಪೂರ್ಣವಾಗಿ ಸತ್ಯವಾಗಿರುವ ವಿಚಾರ. 27ನೇ ತಾರೀಖಿನಂದು ಅಲ್ಲಿನ ನಗರಸಭೆಯ ಅಧ್ಯಕ್ಷ ಈ ಘಟನೆಯಲ್ಲಿ ಪಾಲುಗೊಂಡಿದ್ದಾರೆ ಎನ್ನತಕ್ಕ ಆಪಾದನೆ ಏನಿದೆ ಇದು ರಾಜಕೀಯ ಪ್ರೇರೇಪಿತವಾಗಿರತಕ್ಕದ್ದು. ಅವರು 26ನೇ ತಾರೀಖ್ ಅಲ್ಲಿಂದ ಹೊರಟು 27ನೇ ತಾರೀಖು ಜನತಾದಳದ ಪದಾಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಪ್ರಧಾನಮಂತ್ರಿಗಳು ಮಾತನಾಡತಕ್ಕ ಇಲ್ಲಿನ ಸಭೆಗೆ ಅಲ್ಲಿದ್ದಂಥ ಜನತಾದಳದ ಎಲ್ಲ ಮುಖಂಡರುಗಳು ಪದಾಧಿಕಾರಿಗಳು, ಜಿಲ್ಲಾಪರಿಷತ್, ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಎಲ್ಲರೂ 26ನೇ ತಾರೀಖು ಮಧ್ಯಾಹ್ನ ಹೂವಿನಹಡಗಲಿಯನ್ನು ಬಿಟ್ಟು 27ನೇ ತಾರೀಖು ಇಲ್ಲಿನ ಸಮಾವೇಶದಲ್ಲಿ ಪಾಲುಗೊಂಡಿದ್ದರು. ಆದ್ದರಿಂದ ಈ ಘಟನೆಗೆ ಅವರುಗಳು ಉಪಸ್ಥಿತರಿದ್ದರು, ಇದಕ್ಕೆ ಕುಮ್ಮಕ್ಕು ಕೊಟ್ಟರು ಎಂದು ತಪ್ಪು ಮಾಹಿತಿಯನ್ನು ಅವರಿಗೆ ಕೊಟ್ಟಿರುವ ಸಾಧ್ಯತೆಗಳಿವೆ. ಎರಡನೆಯದಾಗಿ, ಅಲ್ಲಿರುವುದು ಅಂಬೇಡ್ಕರ್‌ರವರ ಭವನ ಎನ್ನತಕ್ಕ ತಪ್ಪುಮಾಹಿತಿ, ಅಭಿಪ್ರಾಯ ಮೂಡಿಬಂದಿದೆ. ಅದು ಅಂಬೇಡ್ಕರ್ ಸಂಘದವರ ಕಛೇರಿಯೂ ಅಲ್ಲ. ಪರಿಶಿಷ್ಟ ಜಾತಿ ಜನಾಂಗದವರ ಗಾಳಿಯಮ್ಮದೇವತೆಗೆ ಸಂಬಂಧಪಟ್ಟ ನಿವೇಶನದಲ್ಲಿ 18ರ ಅನುದಾನದಲ್ಲಿ ಅಲ್ಲಿ ಮಳಿಗೆಯನ್ನು ಕಟ್ಟಿಸಿಕೊಡಬೇಕೆಂದು ಅಲ್ಲಿಯ ಮುಖಂಡರು ಕೊಟ್ಟಂಥ ''ಮನವಿಗೆ, ಅದಕ್ಕೆ ಬದಲಾಗಿ ಅಂಬೇಡ್ಕರ ಕಛೇರಿಯನ್ನು ಕಟ್ಟಿಸಿಕೊಡುತ್ತೇವೆಂದು ಸುಮಾರು 25ಸಾವಿರ ರೂಪಾಯಿ ವೆಚ್ಚದಲ್ಲಿ 13-14 ಅಡಿ ವಿಸ್ತೀರ್ಣದ ಅಂಬೇಡ್ಕರ ಕಛೇರಿಯ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದರು. ಆದು ಆದಾಯದ ಮೂಲವಾಗಲಿಯೆಂಬುದು ಅದರ ಉದ್ದೇಶ ಅಲ್ಲಿ ಮೊದಲು ಅಂಗನವಾಡಿ ಶಾಲೆ ನಡೆಯುತ್ತಿತ್ತು. ಅದೂ ಸಹ ಹರಿಜನರ ಕೇರಿಗಿಂತ ದೂರದಲ್ಲಿರುವ ಪ್ರದೇಶ. ಅಲ್ಲಿ ಬೇರೆ ಹಿಂದುಳಿದಿರುವ ಜನಾಂಗದವರು ಇದ್ದ ಪ್ರದೇಶ. ಈ ಘಟನೆಯಲ್ಲಿ ಆ ಕಟ್ಟಡದ ಕಿಟಕಿ, ಬಾಗಿಲುಗಳನ್ನು ತೆಗೆದುಹಾಕಿರುವುದು ಇದೆ. ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕರಾದ ಹೆಚ್.ಕೆ.ಪಾಟೀಲರು ಸಹ ಅಲ್ಲಿಗೆ ಹೋಗಿ ಬಂದಿದ್ದಾರೆ. ಈ ರೀತಿ ಅಂಬೇಡ್ಕರ್ ಪ್ರತಿಮೆಯನ್ನು ಭಗ್ನಗೊಳಿಸಿರತಕ್ಕದ್ದರ ಬಗ್ಗೆ ಯಾವುದೇ ನಾಗರೀಕ ಪ್ರಪಂಚ ಮತ್ತು ನಾನು ವೈಯಕ್ತಿಕವಾಗಿ ನಾಚಿಕೆಯಿಂದ ತಲೆತಗ್ಗಿಸತಕ್ಕ ಘಟನೆಯಾಗಿದೆ. ನಾವೆಲ್ಲರೂ ಇದನ್ನು ಖಂಡಿಸಲೇಬೇಕಾಗಿದೆ. ಕ್ಷುಲ್ಲಕ ಕಾರಣಗಳಿಗಾಗಿ ಆಗಿರುವ ಕಾರ್ಯಕ್ರಮ ಇದಾಗಿದೆ. ನಮ್ಮ ಹೂವಿನಹಡಗಲಿಯಲ್ಲಿ ಈ ರೀತಿಯಾದ ಪ್ರತಿರೋಧವಾಗಿರುವುದು ಇದೇ ಪ್ರಥಮಬಾರಿಗೆ. ಹಿಂದೆ ಈ ರೀತಿಯಾದ ಘಟನೆಗಳು ಆಗಿರಲಿಲ್ಲ. ಸುದೈವದಿಂದ ಆಸ್ತಿಪಾಸ್ತಿಯ ನಷ್ಟ, ದೊಡ್ಡಗಾಯಗಳಾಗಿರುವ ಪ್ರಸಂಗಗಳು ಆಗಿಲ್ಲ. ಹಳೆಯ ಕೆಲವು ಜಿದ್ದನ್ನು ಇಟ್ಟುಕೊಂಡು ಎರಡು ಗುಂಪಿನವರ ನಡುವೆ ಆಗಿರುವ ವ್ಯವಹಾರ. ಅವರ ಗುಂಪಿನವರ ಮೇಲೆ ಇವರು, ಇವರ ಗುಂಪಿನ ಮೇಲೆ ಅವರು ವೈಯಕ್ತಿಕವಾಗಿ ಹಲ್ಲೆಮಾಡುವ ಪ್ರಯತ್ನದಲ್ಲಿ ಸಮಾಜಘಾತುಕ ಶಕ್ತಿಗಳು ಅಂಬೇಡ್ಕರ್ ಮೂರ್ತಿಯನ್ನು

ಭಗ್ನಗೊಳಿಸಿ ಇಡೀ ಹಡಗಲಿ ಮತ್ತು ವೈಯಕ್ತಿಕವಾಗಿ ನಾನು ತಲೆತಗ್ಗಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ. ನಾನು 27ನೇ ತಾರೀಖು ದೆಹಲಿಗೆ ಹೋಗಿದ್ದೆ. ಪ್ರಧಾನಮಂತ್ರಿಗಳ ಜೊತೆ ನಾಪೆಲ್ಲಾ ಸಹೊದ್ಯೋಗಿಗಳು ಹೊದಂಥ ಸಂದರ್ಭದಲ್ಲಿ ಈ ಘಟನೆಯಾಗಿದೆ. ಅದು ಗೊತ್ತಾದಕೂಡಲೇ ನಾನು 29ರ ರಾತ್ರಿಯೇ ಹಡಗಲಿಗೆ ಹೋಗಿ ಪರಿಶಿಷ್ಟ ಜಾತಿಯವರ ದೇವಾಲಯದಲ್ಲಿ 30ನೇ ತಾರೀಖು ಐನೂರು ಜನರ ಸಮ್ಮುಖದಲ್ಲಿ ಸಭೆ ಮಾಡಿ ಎಲ್ಲರಿಗೂ ಸಮಾಧಾನ ಹೇಳಿ, ಸಾಂತ್ವನ ಹೇಳಿದ್ದೇನೆ. ಆ ಸಂದರ್ಭದಲ್ಲಿ ಅಲ್ಲಿನ ಮುಖಂಡರು ಆ ಕಛೇರಿ ಕಟ್ಟಡವನ್ನು ಅಂಗನವಾಡಿಗೆ ಕೊಟ್ಟು ಬಾಡಿಗೆ ಬರತಕ್ಕ ರೀತಿಯಲ್ಲಿ ಅಥವಾ ಮತ್ತೊಂದು ಅಂಬೇಡ್ಕರ್ ಭವನವನ್ನು ಕಲ್ಯಾಣಮಂಟಪದ ರೀತಿಯಲ್ಲಿ ಉಪಯೋಗ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿದ ತಕ್ಷಣವೇ ಸಮಾಜ ಕಲ್ಯಾಣ ಇಲಾಖೆಯಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ನಿವೇಶನವನ್ನು ಆಯ್ಕೆ ಮಾಡಿ ಆ ಕಟ್ಟಡದ ಕೆಲಸವನ್ನು ಭೂಸೇನಾ ನಿಗಮಕ್ಕೆ ವಹಿಸಿಕೊಟ್ಟಿದ್ದೇವೆ. ನಿವೇಶನದ ಬಗ್ಗೆ ಮುಖಂಡರಲ್ಲೇ ಭಿನ್ನಾಭಿಪ್ರಾಯ ಬಂದಿರುವುದರಿಂದ ಕಟ್ಟಡವನ್ನು ಎಲ್ಲಿ ಕಟ್ಟಬೇಕು ಎಂಬ ಬಗ್ಗೆ ಪ್ರಸ್ತಾಪ ನಡೆದಿದೆ. ಅದರ ಕೆಲಸ ಪ್ರಾರಂಭವಾಗುತ್ತದೆ. ಹಿಂದೆ ಇದ್ದಂಥ ಅಂಬೇಡ್ಕರ್ ಮೂರ್ತಿಯನ್ನು ಅಲ್ಲಿಯ ಸ್ಥಳೀಯ ಸ್ಥಪತಿಯಾದ ಶ್ರೀ ಹಂಸಾಚಾರ್ ಎನ್ನತಕ್ಕವರಿಗೆ ವಹಿಸಿಕೊಡಲಾಗಿತ್ತು. ಅವರು ಈಗ ಶಿಲ್ಪಕಲಾ ಅಕಾಡಮಿಯ ಸದಸ್ಯರೂ ಆಗಿದ್ದಾರೆ. ಈಗಲೂ ಸಹ ಅವರ ಸಂಬಂಧಿಯಾಗಿರುವ ಅಲ್ಲಿಯೇ ಸ್ಥಪತಿಯಾಗಿರುವ ಒಬ್ಬರಿಗೆ ಈ ಕೆಲಸವನ್ನು ವಹಿಸಿಕೊಟ್ಟಿದ್ದಾರೆ. ಮುಂಗಡವಾಗಿ ಹದಿನೆಂಟು ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಆ ವೃತ್ತದಲ್ಲೇನು ದುರಸ್ತಿಯ ಕೆಲಸವಾಗಬೇಕಾಗಿತ್ತು ಅದನ್ನು ಅಲ್ಲಿನ ಬಿ.ಡಿ.ಒ ಮತ್ತು ಇಂಜಿನಿಯರಿಂಗ ವಿಭಾಗದವರು ಮಾಡಿದ್ದಾರೆ. ಈ ದುರಸ್ತಿಯಿಂದಾಗಲಿ, ಆಗಿರುವ ಹೇಯಕೃತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಅವುಗಳು ಇದಕ್ಕೆ ಉತ್ತರವೂ ಅಲ್ಲ. ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಮ್ಮಲ್ಲಿ ಊರ ಅಮ್ಮನ ಜಾತ್ರೆ ವರ್ಷಕ್ಕೊಂದು ಸಾರಿಯಾಗುವುದಿಲ್ಲ, ಐದುವರ್ಷಕೊಮ್ಮೆ ಆಗುತ್ತದೆ. ಈ ಜಾತ್ರೆಗಳಲ್ಲಿ ಆಯಾಯ ಜನಾಂಗದವರಿಗೆ ಸಲ್ಲುವಂಥ ಬಾಬುಗಳು, ಮರ್ಯಾದೆಗಳು ಇರುತ್ತದೆ. 1991ರಲ್ಲಿ ಆದಂಥ ಜಾತ್ರೆಯ ಸಮಯದಲ್ಲಿ ಪರಿಶಿಷ್ಟ ಜಾತಿಯವರು ಕೋಣವನ್ನು ಕಡಿಯುವುದಕ್ಕಿಂತ ಪೂರ್ವದಲ್ಲಿಯೇ ಬೇರೆ ಜನರು ಕಡಿದು ಹಾಕಿದ್ದರಿಂದ ನಾವು ಹುಣುಸು ಚೆಲ್ಲುವುದಿಲ್ಲವೆಂದು ಇವರು ಹೇಳುತ್ತಾರೆ. ಆದ್ದರಿಂದ ಅವರವರ ನಡುವೆ ಭಿನ್ನಾಭಿಪ್ರಾಯ ಬಂದಿರುತ್ತದೆ. ಅನಂತರ ಊರಿನವರು ಕರೆದು ಸಮಾಧಾನ ಮಾಡಿರುವುದೂ ಆಗಿದೆ. ಮೊನ್ನೆ ನಡೆದಿರುವ ಗ್ರಾಮ ದೇವತೆಯ ಜಾತ್ರೆಯ ಸಮಯದಲ್ಲಿ ಎಲ್ಲರು ಗಲಭೆ ಮಾಡಿದ್ದಾರೆ. ಆದರೆ ಇಂಥ ಸಣ್ಣಪುಟ್ಟ ಘರ್ಷಣೆಗಳು ಇತ್ತೀಚೆಗೆ ಆಗುತ್ತಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ನಾನು ಸೈದ್ಧಾಂತೀಕರಿಸುತ್ತೇನೆ

ಎನ್ನುವ ಮಾತಲ್ಲ. ಇಲ್ಲಿ ದಲಿತ ಚಳುವಳಿ ಸಾಂಸ್ಕೃತಿಕ ಆಕ್ರೋಶದ ಅಭಿವ್ಯಕ್ತಿಯಾಗುತ್ತದೆ. ಪ್ರಾಯಶಃ ಡಾ:ಅಂಬೇಡ್ಕರ್‌ರವರು ಮತ್ತು ಮಹತ್ಮಾ ಗಾಂಧಿಯವರು ವಿಭನ್ನವಾಗಿ ಮುಖಾಮುಖಿ ನಿಂತು ಇದರ ಬಗ್ಗೆ ಚರ್ಚೆ ಮಾಡಿದಂಥ ಆ ಮೂಲ ಸಂದರ್ಭದಲ್ಲಿಯೇ ಈ ಜಾತಿಯ ವ್ಯವಸ್ಥೆಯಲ್ಲಿ ಇಷ್ಟು ನಿಕೃಷ್ಟವಾಗಿರುವಂಥ ಈ ಅಸ್ಪೃಶ್ಯತಾ ಪದ್ದತಿಯೇನಿದೆ ಇದು ಪಾಪ ಶುದ್ಧೀಕರಣದ, ಆತ್ಮ ಶುದ್ದೀಕರಣದ ಕೆಲಸವಾಗಬೇಕು, ಪುನಃಪರಿವರ್ತನೆಯಿಂದಾಗಬೇಕು ಎನ್ನುವಂಥ ಗಾಂಧೀಜಿಯವರ ವಾದಕ್ಕೆ ವಿರುದ್ದವಾಗಿರುವ ರೀತಿಯಲ್ಲಿ ಡಾ: ಅಂಬೇಡ್ಕರ್‌ರವರು ಆತ್ಮಗೌರವದ ಮಾದರಿಯನ್ನು ತಂದುಕೊಟ್ಟಿರುವಂಥ ಸಂದರ್ಭದಲ್ಲಿ ಸಾಂಸ್ಕೃತಿಕ ಆಕ್ರೋಶದ ಪರಿವರ್ತನೆಯ ಜೊತೆಜೊತೆಗೆ ರಾಜಕೀಯವಾಗಿ ಹೆಚ್ಚು ಹಕ್ಕುಗಳನ್ನು ಪಡೆಯತಕ್ಕಂಥ ಹೋರಾಟಕ್ಕೆ ಇನ್ನೂ ಸಾಮಾಜಿಕವಾದ ಸ್ಥಿತಿ ತಲುಪಿರುವ ಕಾರಣಕ್ಕಾಗಿ ಇಂಥ ಸಣ್ಣ ಪುಟ್ಟ ಕ್ಷುಲ್ಲಕ ಕಾರಣಗಳು, ಬೇರೆ ಬೇರೆ ಕೋಮುಗಳ ನಡುವೆ ಆಗಿರುವ ಜಗಳ ಆ ಘಟನೆಗೆ ಸೀಮಿತವಾಗತಕ್ಕದ್ದು, ಇಂಥ ಪ್ರಸಂಗದಲ್ಲಿ ಎಲ್ಲರೂ ಒಂದಾಗಿ ಮಾಡತಕ್ಕ ಪ್ರತಿರೋಧವೂ ಇದೆ. ಇದರಲ್ಲಿ ಪ್ರಾಯಶಃ ಬಂಡವಾಳಶಾಯಿ ವ್ಯವಸ್ಥೆಯ ಜಾಗತೀಕರಣ, ಖಾಸಗೀಕರಣ ಮೊದಲಾಗಿರತಕ್ಕಂಥ ಆರ್ಥಿಕ ಉದ್ದೇಶಗಳೇನಿದೆ ಇವುಗಳೂ ಸಹ ಇಂಥ ಪರವಾಗಿರತಕ್ಕಂಥ ಎಲಿನೇಷನ್ ಎಂದು ನಾವೇನು ಕರೆಯುತ್ತೇವೆ ಇಂಥ ಅನ್ಯತೆಯ ಮನೋಭಾವ ಈ ದಬ್ಬಾಳಿಕೆಗೆ ಒಳಗಾಗಿರತಕ್ಕ ಜನಾಂಗದಲ್ಲಿ ಸೃಷ್ಟಿಯಾಗುತ್ತದೆ. ಇದರ ಮೂಲಕ ಆತ್ಮಗೌರವ ಮತ್ತು ಹೆಚ್ಚು ಹಕ್ಕುಗಳನ್ನು ಪಡೆಯುವಂಥ ಪ್ರವೃತ್ತಿ ಬೆಳೆದಾಗ ಇಂಥ ಅವಕಾಶದಿಂದ ನಾವೆಲ್ಲ ವಂಚಿತರಾಗುತ್ತೇವೆ ಎನ್ನತಕ್ಕ ಆತಂಕ ಮತ್ತು ಭಯದ ಮೂಲಕ ಇವರು ಪ್ರತಿರೋದವೊಡ್ಡತಕ್ಕದ್ದೂ ಇದೆ. ಇದರ ಬಗ್ಗೆ ನಾನು ವಿಷಧವಾಗಿ ಸೈದ್ಧಾಂತೀಕರಿಸಲು ಹೋಗುವುದಿಲ್ಲ. ಇದೂ ಸಹ ಮೂಲಭೂತವಾಗಿರುವ ಒಂದು ಪರಿಣಾಮ. ಈ ದೃಷ್ಟಿಯಿಂದ ಆ ಘಟನೆಯಲ್ಲೇನು ನಗರಸಭೆಯ ಅಧ್ಯಕ್ಷರು ಪಾಲುಗೊಂಡಿದ್ದಾರೆ ಎನ್ನತಕ್ಕ ಮಾತು ತಪ್ಪಾಗಿರುವ ಮಾಹಿತಿಯಾಗಿದೆ. ವಿಚಾರಣೆಯ ಸಂದರ್ಭದಲ್ಲಿ ಯಾರ್ಯಾರು ತಪ್ಪಿತಸ್ತರಾಗಿದ್ದಾರೆ ಅವರಿಗೆ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಪುನಃ ಶ್ರೀರಾಮಮಂದಿರಕ್ಕೆ ಬಂದು ಸವರ್ಣ ಹಿಂದೂಗಳನ್ನೆಲ್ಲ ಕರೆದು ಮಾತನಾಡುವಂಥ ಸಂದರ್ಭದಲ್ಲೂ ಅವರು ನಮ್ಮವರು ಏನೂ ಕೆಲಸಮಾಡಲಿಲ್ಲ, ಯಾರನ್ನೂ ಬಂಧಿಸಲಿಲ್ಲ, ನೀವೂ ಅದಕ್ಕೆ ಪ್ರೋತ್ಸಾಹ ಕೊಟ್ಟಿದ್ದೀರಿ ಎನ್ನುವ ರೀತಿಯಲ್ಲಿ ನನಗೇ ಆಪಾದನೆ ಮಾಡಿರುವುದಿದೆ. ಇದು ಬಹಳ ಸಣ್ಣತನದ ವಿಚಾರವಾಗಿದ್ದರೂ ಈ ಪ್ರಸಂಗದ ಹಿನ್ನೆಲೆಯಲ್ಲಿ ಇದನ್ನು ಬಹಿರಂಗಪಡಿಸತಕ್ಕದ್ದು ಆಗತ್ಯ ಎನ್ನತಕ್ಕ ಕಾರಣಕ್ಕಾಗಿ ನಾನು ಹೇಳುತ್ತೇನೆ. ನಮ್ಮ ಹೂವಿನಹಡಗಲಿಯಲ್ಲಿ ಇರುವಂಥ ಡಿ.ವೈ.ಎಸ್.ಪಿ.ಯವರು ಪರಿಶಿಷ್ಟ ಜಾತಿಯವರು, ಸರ್ಕಲ್ ಇನ್ಸ್‌ಪೆಕ್ಟರ್‌ರವರು ಗೊಲ್ಲ ಜನಾಂಗದವರು, ಸಬ್‌ಇನ್ಸ್‌ಪೆಕ್ಟರ್‌ರವರು ಪರಿಶಿಷ್ಟ ಜಾತಿಯವರು, ಅಲ್ಲಿರುವ ಸಹಾಯಕ ಸಬ್ ಇನ್ಸ್‌ಪೆಕ್ಟರ್‌ಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಯವರು ಮತ್ತೊಬ್ಬರು

ಪರಿಶಿಷ್ಟ ಪಂಗಡವರು. ಅಲ್ಲಿರುವ ಇಪ್ಪತ್ತೆರಡು ಮಂದಿ ಪೊಲೀಸ್ ಪೇದೆಗಳಲ್ಲಿ ಮೂರು ಮಂದಿ ಲಿಂಗಾಯಿತರು, ಉಳಿದವರು ಹಿಂದುಳಿದ ಜಾತಿಗೆ, ಪರಿಶಿಷ್ಟ ಜಾತಿಗೆ ಮತ್ತು ಮುಸ್ಲಿಂ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಈ ವಿವರಗಳನ್ನು ಕೊಡಬೇಕಾದಂಥ ಅಗತ್ಯವಿರಲಿಲ್ಲ. ಆದರೆ ದಾಖಲೆಯಲ್ಲಿ ಸರಿಯಾಗಿರಲಿ ಎಂಬ ಉದ್ದೇಶದಿಂದ ಹೇಳಬೇಕಾಗಿದೆ. ಈ ಸಿಬ್ಬಂದಿಯವರೆಲ್ಲರೂ ತಕ್ಷಣವೇ ಪ್ರತಿರೋಧ ಮಾಡಿ ಘಟನೆಯನ್ನು ನಿಲ್ಲಿಸಿದ್ದಾರೆ. 27ನೇ ತಾರೀಖು ಬೆಳಗಿನ ಜಾವ 2 ಇಲ್ಲವೆ 3 ಗಂಟೆಯ ಸಮಯದಲ್ಲಿ ಸಂಬಂದಪಟ್ಟವರೆಲ್ಲರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ಅಲ್ಲಿ ಆಗುವಂಥ ಅನಾಹುತವನ್ನು ತಡೆಗಟ್ಟಿದ್ದಾರೆ. ವಿಶೇಷ ನ್ಯಾಯಾಲಯದ ಮುಂದೆ ಅವರೆಲ್ಲರನ್ನು ಕಳಿಸಿಕೊಟ್ಟಿದ್ದಾರೆ. 11ನೇ ತಾರೀಖಿನವರೆಗೆ ಅವರುಗಳು ನ್ಯಾಯಾಂಗ ಬಂಧನದಲ್ಲಿರಬೇಕೆಂದು ಹೇಳಿದಮೇಲೆ, ಏಳು ದಿವಸಗಳವರೆಗೆ ಹಡಗಲಿ ಪಟ್ಟಣಕ್ಕೆ ಪ್ರವೇಶ ಮಾಡಬಾರದು ಎನ್ನತಕ್ಕ ಷರತ್ತಿನಮೇಲೆ ಅವರುಗಳಿಗೆ ಜಾಮೀನು ಕೊಡಲಾಗಿದ್ದು ಇತ್ತೀಚೆಗೆ ಅವರುಗಳು ಹಡಗಲಿಗೆ ಬಂದಿದ್ದಾರೆ. ಅನಂತರ ಹಡಗಲಿಯಲ್ಲಿ ಶಾಂತ ಪರಿಸ್ಥಿತಿ ಮೂಡಿದೆ. ಹಿಂದೆ ಆದಂಥ ಅಹಿತಕರವಾದ ಘಟನೆಯ ವಾತಾವರಣ ಇಂದು ಇಲ್ಲ. ಈಗ ಆಗಿರುವ ಘಟನೆ ಪ್ರಾಯಶಃ ರಾಜಕೀಯವಾಗಿ ನೇರವಾಗಿಲ್ಲದಿದ್ದರೂ ನನ್ನನ್ನೂ ಸಹ ಅಪಾದನೆಗೆ ಗುರಿಮಾಡಬೇಕು ಎನ್ನತಕ್ಕ ಪ್ರವೃತ್ತಿ ಕೆಲವು ಕಡೆ ಇರಬಹುದು. ಏಕೆಂದರೆ ನಮ್ಮ ಹಡಗಲಿಯಲ್ಲಿ ಆಗಲಾರದಂಥದನ್ನು ಬಳ್ಳಾರಿಯಲ್ಲಿ, ಹೊಸಪೇಟೆಯಲ್ಲಿ, ಬೇರೆ ಕಡೆಗಳಲ್ಲಿ ಮಾಡಿ ನೈತಿಕತೆಯನ್ನು ಹೊತ್ತು ಪ್ರಕಾಶ್‌ರವರು ರಾಜೀನಾಮೆಯನ್ನು ಕೊಡಬೇಕು ಎನ್ನತಕ್ಕ ಚಳುವಳಿಯಾದಾಗ ಪ್ರಾಯಶಃ ಇದಕ್ಕೆ ಬೇರೆ ಬೇರೆ ಆಯಾಮಗಳು ಪ್ರಾರಂಭದ ರೀತಿ ಇಲ್ಲದೇಹೋಗಿದ್ದರಿಂದ, ಇವುಗಳಿಗೆ ಕಣ್ಣು, ಕಾಲು, ಮೂಗು ಮೂಡತಕ್ಕ ಅವಕಾಶಗಳು ಇರುತ್ತದೆ. ಅದು ಬಹಳ ಮುಖ್ಯವಾದುದಲ್ಲ. ಇದರ ಬಗ್ಗೆ ಸಿ.ಓ.ಡಿ. ತನಿಖೆಯನ್ನು ಮಾಡುವುದಾಗಿ ಸರ್ಕಾರ ನಿಲುವನ್ನು ಸ್ಪಷ್ಟಮಾಡಿದೆ.

ಇದು ಸರ್ಕಾರದ ನಿಲುವಾಗಿದೆ. ವೈಯಕ್ತಿಕವಾಗಿ ನಾನು ಹೇಳುತ್ತಿದ್ದೇನೆ ಯಾವುದೇ ತರವಾಗಿರತಕ್ಕಂತಹ ಒಂದು ವಿಚಾರಣೆಯನ್ನು, ಪ್ರಾಯಶ: ಎಸ್.ಸಿ:ಎಸ್.ಟಿ. ಕಮಿಟಿಯಿಂದ ಆಗಬಹುದು, ಅಥವಾ ಮಾನ್ಯ ಖರ್ಗೆಯವರೇ ಸ್ವತ ಕುಳಿತು ಅದರ ಬಗ್ಗೆ ಯಾರನ್ನಾದರೂ ಕಳುಹಿಸಿ ತನಿಖಾ ವರದಿಯನ್ನು ತರಿಸಿಕೊಳ್ಳಬಹುದು.ಈ ತರಹದಲ್ಲಿ ಯಾರು ತಪ್ಪಿತಸ್ಥರಾಗಿದ್ದಾರೆ ಅವರಿಗೆ ಏನಾದರೂ ರಕ್ಷಣೆ ಕೊಟ್ಟಿದೇವೆ ಎಂದರೆ ಅವರು ಹೇಳುವಂತಹ ಶಿಕ್ಷೆಗೆ ನಾನು ವೈಯಕ್ತಿಕವಾಗಿ ತಯಾರಾಗಿದ್ದೇನೆ ಎನ್ನುವಂತಹ ಮಾತನ್ನು ಹೇಳಿ, ಇದು ಅತ್ಯಂತ ತಲಿತಗ್ಗಿಸುವಂತಹ ನಾಚಿಕೆಗೇಡಿನ ಪ್ರಸಂಗ. ಇದು ಯಾವ ರೂಪವನ್ನು ತಾಳುತ್ತದೆ ಸನ್ಮಾನ್ಯ ಅಧ್ಯಕ್ಷರೇ ಅಂದರೆ, ಅಲ್ಲೆಲ್ಲೋ ದೂರದ ಹಡಗಲಿಯಲ್ಲಿ ಆಗಿರತಕ್ಕಂತಹ ಈ ಘಟನೆ, ಮತ್ತೊಂದು ಆಯಾಮವನ್ನು ಪಡೆಯಬೇಕು ಎನ್ನುವಂತಹ ಕಾರಣಕ್ಕಾಗಿ 92 ಮೈಲಿಗಳ ಆಚೆ ಇರತಕ್ಕಂತಹ ಬಳ್ಳಾರಿ ನಗರದಲ್ಲಿ, ವೀರಶೈವ ವಿದ್ಯಾವರ್ಧಕ ಸಂಘದ ಸ್ಥಾಪಕರಾದಂತಹ

ಶ್ರೀ ವೈ.ಮಹಾಬಲೇಶ್ವರಪ್ಪನವರ ಒಂದು ಮೂರ್ತಿಯ ಶಿರವನ್ನು ಅಲ್ಲಿ ಭಗ್ನಗೊಳಿಸುವಂತ ರೀತಿಯಲ್ಲಿ ಪರ್ಯಾವಸಾನಗೊಳ್ಳುತ್ತಿದೆ. ಈ ರೀತಿಯಾಗಿ ಕೆಲವು ಸಮಾಜಘಾತುಕ ಶಕ್ತಿಗಳು, ಈ ತರಹವಾಗಿರತಕ್ಕಂತಹ ಎರಡು ಜನಾಂಗದ ನಡುವೆ ನಿರಂತರವಾಗಿರತಕ್ಕಂತಹ ಒಂದು ಕಂದರ ಉಂಟಾಗಬೇಕು ಎನ್ನುವಂತಹ ಪ್ರಯತ್ನ ಕೂಡ ಇದರಲ್ಲಿ ಇರುತ್ತದೆ ಎನ್ನುವಂತಹ ಮಾತನ್ನು ಹೇಳಿ ತಾವು ಯಾವುದೇ ನಿರ್ಣಯವನ್ನು ತೆಗೆದುಕೊಂಡರೂ ಕೂಡ ನಾನು ಅದಕ್ಕೆ ಸಿದ್ಧನಿದ್ದೇನೆ ಮತ್ತೊಂದು ಸಲ ನಾನು ಆ ಕ್ಷೇತ್ರದ ಶಾಸಕನೂ ಆಗಿ ಈ ಪ್ರಕರಣದ ಬಗ್ಗೆ ಕ್ಷಮೆಯನ್ನು ಕೇಳುತ್ತೇನೆ, ನಾನು ನಾಚಿಕೆಯಿಂದ ತಲೆತಗ್ಗಿಸುವಂತಹ ಕಾರ್ಯ ಆಗಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಈಗ ಅಲ್ಲಿ ನಡೆದಿರತಕ್ಕಂತಹ ಘಟನೆಯ ವಾಸ್ತವಿಕತೆಯ ಒಂದು ಚಿತ್ರಣವನ್ನು ಇಲ್ಲಿ ಕೊಟ್ಟಿದ್ದಾರೆ., ಶ್ರೀಮಾನ್ ಖರ್ಗೆಯವರು ಎರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಂತಹ ಸಂಘರ್ಷಗಳು ರಾಜ್ಯದಲ್ಲಿ ಅಲ್ಲಿ ಇಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳು ಮತ್ತು ಇದನ್ನು ಯಾವ ರೀತಿಯಾಗಿ ನಿಲ್ಲಿಸಬೇಕು ಎಂಬ ಬಗ್ಗೆ ಒಂದು ಚಿಂತನೆಯನ್ನು ಅವರು ವ್ಯಕ್ತ ಮಾಡಿದ್ದಾರೆ. ಆ ಚಿಂತನೆಯಲ್ಲಿ ಬಹಳ ಪ್ರಾಮುಖ್ಯ ಆಗಿರತಕ್ಕಂಥದ್ದು, ಈ ಪುತ್ಥಳಿಗಳನ್ನು ನಿರ್ಮಾಣ ಮಾಡುವುದು, ಅದನ್ನು ಅಲ್ಲಿ ಅಳವಡಿಸುವುದು, ಇದರ ಬಗ್ಗೆ ನಾನು ಹೇಳುತ್ತಿದ್ದೇನೆ, ನಮ್ಮ ರಾಜ್ಯದ ಹಲವಾರು ಭಾಗಗಳಲ್ಲಿ ಏಕಾಏಕಿಯಾಗಿ ಯಾವುದೇ ಕಾರಣವಿಲ್ಲದೆ, ಎಲ್ಲೋ ಚಿಕ್ಕ ಪುಟ್ಟ ಘರ್ಷಣೆಗಳಾಗಿರತಕ್ಕವು ಪರ್ಯಾವಸಾನವಾಗುವುದು ಒಂದು ಅಂಬೇಡ್ಕರ್ ಪುತ್ಥಳಿಯ ಮೇಲೆ, ಬಸವೇಶ್ವರರ ಪುತ್ಥಳಿಯ ಮೇಲೆ, ಗಾಂಧಿಯವರ ಪುತ್ಥಳಿಯ ಮೇಲೆ, ಶಿವಾಜಿಯ ಪುತ್ಥಳಿಯ ಮೇಲೆ, ಹೀಗೆ ಯಾವುದಾದರೂ ಒಂದು ಪುತ್ಥಳಿಯ ಮೇಲೆ ನಡೆಯುವಂತಹ ದಾಳಿಯಿಂದ. ಇದರಿಂದ ಜನಾಂಗ ಜನಾಂಗದ ಮಧ್ಯೆ ಸಂಘರ್ಷವಾಗಿ, ಅದು ಬೃಹದಾಕಾರವಾದ ಜ್ವಾಲೆಯಾಗಿ ಪರಿಣಮಿಸುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಮಾತನ್ನು ಹೇಳುತ್ತಿದ್ದೇನೆ, ಮಾನ್ಯ ಖರ್ಗೆಯವರ ಸಲಹೆ ಬಹಳ ಯೋಗ್ಯವಾಗಿರತಕ್ಕ ಸಲಹೆ. ಆಡಳಿತ ಪಕ್ಷದವರಾದ ನಾವು ಮತ್ತು ನೀವೆಲ್ಲರೂ ಸೇರಿ.....

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಕಾರಣಕ್ಕೆ ಮಾನ್ಯ ಸಭಾಧ್ಯಕ್ಷರೇ, ದೊಡ್ಡ ದೊಡ್ಡ ಐತಿಹಾಸಿಕ ಹಿನ್ನೆಲೆಯಿರುವಂತಹ ಮಹಾಪುರುಷರ ಪುತ್ಥಳಿಗಳನ್ನೇ ಹಾಕಬಾರದು ಎನ್ನುವಂತಹದ್ದು ಅರ್ಥವಿಲ್ಲದ್ದು. ಅವರು ಏತಕ್ಕಾಗಿ ಈ ಮಾತನ್ನು ಹೇಳಿದರು ಎಂದರೆ, ಇಂತಹ ಗಂಭೀರವಾದಂತಹ ಸಂಗತಿಗಳು ಬಂದಾಗ ಜನ ಪರಸ್ಪರ ಬಡಿದಾಡುವುದು ನಿಲ್ಲಬೇಕು ಅಂದರೆ, ಪುತ್ಥಳಿಯಿಲ್ಲದಿದ್ದರೆ ಈ ಬಡಿದಾಡುವಂತಹ ಪ್ರವೃತ್ತಿ ಏನಿದೆ ಇದೇನೂ ನಿಲ್ಲುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ನಾನು ಆ ರೀತಿ ಹೇಳಲಿಲ್ಲ. ಸರ್ಕಾರದ ಪರ್ಮಿಷನ್ ತೆಗೆದುಕೊಂಡು ಪ್ರತಿಮೆಗಳನ್ನು ಸ್ಥಾಪಿಸಬೇಕು ಎಂದು ನಾನು ಹೇಳಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನೇನು ಹೇಳಲಿಕ್ಕೆ ಹೊರಟ್ಟಿದ್ದೇನೆ ಎಂದರೆ, ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆ ಇರಬೇಕು ಅಂತ ಹೇಳಿ ಅದನ್ನು ಉಪಯೋಗ ಮಾಡಿಕೊಂಡು ಮುಖಂಡರಾಗುವಂಥಾದ್ದು ಅಸ್ಪೃಶ್ಯತೆ ಬೇಡ ಅಂತ ಹೇಳಿ ಅದನ್ನು ಉಪಯೋಗ ಮಾಡಿಕೊಂಡು ಲಾಭ ಮಾಡುವಂಥಾದ್ದು ನಡೆದಿದೆಯೇ ಹೊರತು ನಾವೆಲ್ಲರೂ ಮನುಷ್ಯರು, ಮನುಷ್ಯರಾಗಿ ಬದುಕಬೇಕೆನ್ನುವ ವಾತಾವರಣ ತರಹದ್ದೇ ಇಂತಹ ಒಂದ ಪರಿಸ್ಥಿತಿಯನ್ನು ನಾವಿವತ್ತು ನೋಡುತ್ತಿದ್ದೇವೆ, ಸಣ್ಣ ಪುಟ್ಟ ಕಾರಣಕ್ಕಾಗಿ ಯಾವನೇ ಇರಬಹುದು, ಡಾ: ಅಂಬೇಡ್ಕರ್ ಅಥವಾ ಬಸವೇಶ್ವರರದು ಇರಬಹುದು, ಸರಿಯಾದಂತಹ ಕ್ರಮ ತೆಗೆದುಕೊಳ್ಳಿ, ಬಿಗಿ ಮಾಡಿ. ಈ ಪ್ರವೃತ್ತಿಯನ್ನು ನಾವೆಲ್ಲರೂ ಒಂದಾಗಿ ನಿಂತು ಕೊನೆ ಮಾಡೋಣ. ಆದರೆ ಆ ಕಾರಣದಿಂದಲೇ ಪುತ್ಥಳಿಗಳೇ ಬೇಡ ಎಂದು ಹೇಳುವಂಥಾದ್ದು ಬೇಡ. ಆ ರೀತಿ ತಾವು ಹೇಳಿ ಬಿಡುತ್ತೀರ ಎಂದು ಭಾವಿಸಿ ನಾನು ಮಧ್ಯಪ್ರವೇಶ ಮಾಡಿದೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರ ಸಲಹೆ ಕೂಡ ಒಳ್ಳೆಯದು. ಆದರೆ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿರತಕ್ಕಂಥ ಅಂಶ ಏನೆಂದರೆ, ರಸ್ತೆ ಮಧ್ಯದಲ್ಲಿ, ನಡೆಯುತ್ತಿರತಕ್ಕಂತಹ ಜಾಗದಲ್ಲಿ, ಫುಟ್‌ಪಾತ್‌ಗಳ ಮೇಲೆ, ಅಲ್ಲಿ ಇಲ್ಲಿ ನಾವು ಹಲವಾರು ಸಂದರ್ಭಗಳಲ್ಲಿ ನೋಡುತ್ತಿದ್ದೇವೆ, ಆದ್ದರಿಂದ ಇಂತಹ ಒಂದು ಸಂದರ್ಭ ಬಂದಾಗ ಇದರ ಬಗ್ಗೆ ಎಲ್ಲೋ ಒಂದು ಪುತ್ಥಳಿಯನ್ನು ನಾವು ನಿರ್ಮಾಣ ಮಾಡಬೇಕಾಗುತ್ತದೆ, ಅಳವಡಿಸಬೇಕಾಗುತ್ತದೆ, ಆ ಸಂದರ್ಭದಲ್ಲಿ ಜಾಗ ಯಾವುದು ಎಂದು ನೋಡಬೇಕಾಗುತ್ತದೆ. ನೋಡಿಯಾದ ಮೇಲೆ ಎಲ್ಲರೂ ಅದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಸರ್ಕಾರವೂ ಕೂಡ ಅದಕ್ಕೆ ಆಯಿತು ಈ ಜಾಗದಲ್ಲಿ ಮಾಡಿ ಎಂದು ಹೇಳುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಬೇಕು ಎಂಬ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿರತಕ್ಕಂತಹ ವಿಚಾರ ಇದಾಗಿದೆ. ಇದು ಬಹಳ ಯೋಗ್ಯವಾಗಿರತಕ್ಕಂತಹ ಸಲಹೆ. ನಾವು ನೀವೆಲ್ಲರೂ ಸೇರಿ ಈ ಒಂದು ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಇದಕ್ಕೆ ನಾವೆಲ್ಲರೂ ಒಪ್ಪಿದರೆ ಬಹುಶಃ ನಾವು ಈ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಇದಕ್ಕೆ ಒಂದು ಅಂತಿಮವಾಗಿರತಕ್ಕಂತಹ ರೂಪುರೇಷೆಯನ್ನು ಮಾಡುವುದಕ್ಕೆ ನಾವು ಸರ್ಕಾರದ ವತಿಯಿಂದ ತಯಾರಾಗಿದ್ದೇವೆ. ನಿಮ್ಮೆಲ್ಲರ ಜೊತೆಯಲ್ಲಿ ಕೂಡಿ ಇದರ ಬಗ್ಗೆ ನಾವೊಂದು ಚರ್ಚೆಯನ್ನು ಮಾಡಬೇಕಾದಂತಹ ಅವಶ್ಯಕತೆ ಇದೆ. ಮಾನ್ಯ ಖರ್ಗೆಯವರು ಪ್ರಸ್ತಾಪಿಸಿರತಕ್ಕಂತಹ ಇನ್ನೊಂದು ವಿಚಾರ ಏನೆಂದರೆ, ಸಮಾಜ ಕಲ್ಯಾಣ ಇಲಾಖಾ ವಿಷಯ ಸಮಿತಿಯಾಗಲಿ, ಅಥವಾ ನಮ್ಮ ಸದನ ಸಮಿತಿಗಳೇನಿವೆ, ಸದನ ಸಮಿತಿಯಲ್ಲಿ ಯಾರಿದ್ದಾರೆ, ಆ ಸಮಿತಿಯ ಸದಸ್ಯರುಗಳಿಗೆ ಇದನ್ನು ಒಪ್ಪಿಸೋಣ. ಅವರೇ ಹೋಗಿ ಇದನ್ನು ನೋಡಿಕೊಂಡು ಬರಲಿ. ಇದಕ್ಕೆ

ಸಂಬಂಧಪಟ್ಟಂಥದ್ದಕ್ಕೆ ಸಂಪೂರ್ಣವಾಗಿ ಚರ್ಚೆ ಮಾಡಿ, ಅಲ್ಲಿರತಕ್ಕಂತಹ ಎಲ್ಲರನ್ನೂ ಕೂಡ ಪ್ರಶ್ನೆ ಮಾಡಿ, ವಿಚಾರಣೆ ಮಾಡಿ, ಅವರೊಂದು ವರದಿಯನ್ನು ಕೊಡಲಿ. ಇದರ ಹಿನ್ನೆಲೆ ಏನು? ಇದಕ್ಕೆ ಯಾರೆಲ್ಲಾ ಕಾರಣಕರ್ತರು? ಇದಕ್ಕೆ ಇರತಕ್ಕಂತಹ ಸೈದ್ಧಾಂತಿಕ ಹಿನ್ನೆಲೆ ಏನಿದೆ, ಅದು ಯಾವುದು ಎಂಬ ಬಗ್ಗೆ ಪರಿಶೀಲಿಸಲು ಆ ಸಮಿತಿಗೆ ಒಪ್ಪಿಸಲಿಕ್ಕೆ ಸರ್ಕಾರ ಒಪ್ಪುತ್ತದೆ, ಮಾನ್ಯ ಅಧ್ಯಕ್ಷರೇ ಅದನ್ನು ನೇರವಾಗಿ ವಿಷಯ ಸಮಿತಿಗೂ ಅಥವಾ ಸದನ ಸಮಿತಿಗೋ ಒಪ್ಪಿಸುವುದರ ಮುಖಾಂತರ, ಅವರು ಅಲ್ಲಿಗೆ ಹೋಗಿ ವಿಚಾರಣೆ ನಡೆಸಿ, ಒಂದು ವರದಿಯನ್ನು ಈ ಸದನಕ್ಕೆ ಕೊಟ್ಟು, ಆ ವರದಿಯ ಹಿನ್ನೆಲೆಯಲ್ಲಿ, ಅವರು ಮಾಡುವ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಬೇಕೋ, ಆ ಕ್ರಮವನ್ನು ಕೈಗೊಳ್ಳಲಿಕ್ಕೆ ಸರ್ಕಾರ ಸಿದ್ಧ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅವರ ಆ ಒಂದು ಸಲಹೆಯನ್ನು ಕೂಡ ಸರ್ಕಾರ ನೇರವಾಗಿ ಒಪ್ಪಿದೆ. ಇನ್ನು ಅವರು ಕೊಟ್ಟಿರುವಂಥ ಮೂರನೇ ಸಲಹೆ ಏನೆಂದರೆ, ಇದನ್ನು ಸಿ.ಬಿ.ಐ.ಗೆ ಅಥವಾ ಯಾವುದಾದರೂ ಒಂದು ನ್ಯಾಯಾಂಗ ತನಿಖೆಗೆ ಒಪ್ಪಿಸಿ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ಇದರ ಬಗ್ಗೆ ಈಗಾಗಲೇ ವಿಚಾರಣೆ ನಡೆದಿದೆ. ಈಗ ಅಲ್ಲಿ ಶಾಂತ ಪರಿಸ್ಥಿತಿ ನೆಲಸಿದೆ. ಆದ್ದರಿಂದ ನಾವೇನು ಮಾಡಿದ್ದೇವೆ ಎಂದರೆ, ಅಲ್ಲಿರತಕ್ಕಂತಹ ಸ್ಥಳೀಯ ಪೊಲೀಸರು ಹಲವಾರು ಕಾರಣಗಳಿಂದ ನಿಷ್ಪಕ್ಷಪಾತವಾಗಿರತಕ್ಕಂತಹ ತನಿಖೆಯನ್ನು ನಡೆಸಲಿಕ್ಕೆ ಆಗದೇ ಇರತಕ್ಕಂತಹ ಅನಿವಾರ್ಯ ಪರಿಸ್ಥಿತಿ ಎಲ್ಲಾದರೂ ಬಂದಿದ್ದರೂ ಕೂಡ ಬಹುಶ: ಶ್ರೀಮಾನ್ ಪ್ರಕಾಶ್‌ರವರು ಹೇಳಿರತಕ್ಕಂತಹ ಹಿನ್ನೆಲೆಯಲ್ಲಿ ಅಲ್ಲಿರತಕ್ಕಂತಹ ಪೊಲೀಸರು ಕೂಡಲೇ ಕಾರ್ಯ ಪ್ರವೃತ್ತರಾಗಿದ್ದಾರೆ, ಆಗಬೇಕಾಗಿರತಕ್ಕಂತಹ ಘಟನೆಯನ್ನು ನಿಲ್ಲಿಸಿ ಶಾಂತ ಪರಿಸ್ಥಿತಿಯನ್ನು ತಂದಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಬಹುಶಃ ಮಾನ್ಯ ಖರ್ಗೆಯವರೂ ಕೂಡ ಒಪ್ಪಿಕೊಂಡರೆ ಇದರ ಬಗ್ಗೆ ಒಂದು ಸದನ ಸಮಿತಿ ಮಾಡಿ, ಈ ಬಗ್ಗೆ ಸತ್ಯ ಹೊರಬರಲಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಈ ಪ್ರತಿಮೆಗಳನ್ನು ಸ್ಥಾಪನೆ ಮಾಡಬೇಕಾದರೆ ಸರ್ಕಾರದ ಅನುಮತಿಯಿಲ್ಲದೆ ಮಾಡಬಾರದು ಎನ್ನತಕ್ಕಾಂಥದ್ದು ಸರ್ಕಾರದ ನೀತಿಯಾಗಬೇಕು. ಏಕೆಂದರೆ ಯಾರೇ ಮಾಡಲಿ, ಮಾಡುವುದಕ್ಕೆ ಏನೂ ಅಭ್ಯಂತರವಾಗುವುದು ಬೇಡ. ತಾವು ಪ್ರತಿಮೆಯನ್ನು ಮಾಡಬೇಕು ಎನ್ನುವ ವಿಷಯವನ್ನು ಸರ್ಕಾರಕ್ಕೆ ಇಂತಹ ಕಡೆ ಪ್ರತಿಮೆ ಮಾಡಬೇಕೆಂದು ಮಾಡಿದ್ದೇವೆ, ಯಾವ ಒಂದು ಸಾರ್ವಜನಿಕ ಜಾಗದಲ್ಲಿ ಪ್ರತಿಮೆಯನ್ನು ಮಾಡಬೇಕಾದರೆ ಸರ್ಕಾರದ ಅನುಮತಿ ಬೇಕು ಎನ್ನತಕ್ಕಾಂಥದ್ದು ಇರಬೇಕು. ಎರಡನೆಯದಾಗಿ, ಬಹಳ ಪ್ರಮುಖವಾಗಿರತಕ್ಕಂತಹ ಸಲಹೆಯನ್ನು ಮಾನ್ಯ ಸಂಸದೀಯ ಸಚಿವರು ಏನು ಹೇಳಿದರು ಎಂದರೆ ಸದನ ಸಮಿತಿಯನ್ನು ಮಾಡಬೇಕು ಎನ್ನುವಂಥಾದ್ದು. ಇದು ಸಿ.ಬಿ.ಐ.ಗಿಂತ, ಸಿ.ಓ.ಡಿ. ತನಿಖೆಗಿಂತ ಬಹಳ ಮಹತ್ತರವಾದ ಸಲಹೆ. ಆದ್ದರಿಂದ ಈ ಬಗ್ಗೆ ನಾವೆಲ್ಲರೂ ಸ್ವಲ್ಪ ಹೆಚ್ಚುಕಡಿಮೆ ಇದನ್ನು ಸ್ವಾಗತ ಮಾಡುತ್ತೇವೆ. ತಾವು ಸದನ

ಸಮಿತಿಯನ್ನು ರಚನೆ ಮಾಡಿ, ಆ ಸಮಿತಿ ಬಹಳ ಬೇಗ ಒಂದು ವರದಿಯನ್ನು ಕೊಡಬೇಕು ಎನ್ನುವುದನ್ನು ತಾವು ಸೂಚಿಸಬಹುದು ಎಂದು ನಾನು ತಮಗೆ ಪ್ರಾಮಾಣಿಕವಾದ ಸಲಹೆಯೊಂದನ್ನು ನೀಡುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಬಹಳ ಡೀಟೈಲ್ಸಾಗಿ, ಅವರ ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿವರಣೆಯನ್ನು ಕೊಟ್ಟರು. ನಾನು ಅದಕ್ಕಾಗಿ ಮೊದಲೇ ಹೇಳಿದೆ, ಇದು ರಾಜಕೀಯ ದುರುದ್ದೇಶದಿಂದ ಯಾರ ಹೆಸರೂ ಕೂಡ ನಾವು ನೇರವಾಗಿ ಹೇಳತಕ್ಕಂಥದ್ದು ಅಲ್ಲ. ಆದರೆ ತಾವು ಹೇಳಿದ ಹಾಗೆ ಈಗ ಮುನಿಸಿಪಲ್ ಅಧ್ಯಕ್ಷರು ಇಲ್ಲಿ ಕಾನ್ಫರೆನ್ಸ್‌ಗೆ ಬಂದಿದ್ದರು ಎನ್ನತಕ್ಕಂಥ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅಲ್ಲಿಯ ಸ್ಥಳೀಯ ಜನರು ಏನು ಹೇಳುತ್ತಾರೆ ಎಂದರೆ, ಅವರ ಕುಮ್ಮಕ್ಕಿನಿಂದ ಮತ್ತು ಅಲ್ಲಿ ಎಲ್ಲಾ ತಯಾರು ಮಾಡಿ ಈ ಕಡೆಗೆ ಬಂದಿದ್ದರು ಎನ್ನತಕ್ಕಂಥದ್ದು ಅಲ್ಲಿಯ ಸ್ಥಳೀಯ ಜನರು ಹೇಳುತ್ತಾರೆ. ದಲಿತ ಸಂಘರ್ಷ ಸಮಿತಿಯವರೂ ಹೇಳುತ್ತಾರೆ, ಬೇರೆ ಜನರೂ ಕೂಡ, ಇವತ್ತು 3-4 ಜನ ಬಂದಿದ್ದಾರೆ, ಅವರೂ ಕೂಡ ಇದೇ ರೀತಿ ಹೇಳುತ್ತಾರೆ ಆದ್ದರಿಂದ ಆ ಆಪಾದನೆ ಕೂಡ ಮಾನ್ಯ ಮಂತ್ರಿಗಳ ಮೇಲೆ ಬರುವುದು ಬೇಡ. ಅದಕ್ಕಾಗಿ ನಾನು ಇದು ಇಂಪಾರ್ಷಿಯಲ್ ಆಗಿ ಎನ್‌ಕ್ವೈರಿ ಆಗಬೇಕು ಎಂದರೆ ನೀವು ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಮುಖಾಂತರ ನ್ಯಾಯಾಂಗ ತನಿಖೆ ನಡೆಸಿ ಇಲ್ಲಾಂದರೆ ಇದನ್ನು ಸಿ.ಬಿ.ಐ.ಗೆ ರೆಫರ್‌ಮಾಡಿ. ಏಕೆಂದರೆ ಯಾರಿಗೂ ಕೂಡ ಸಿ.ಬಿ.ಐ. ಕನ್‌ಸರ್ನ್ಡ್ ಇಲ್ಲ. ಅವರು ಇಂಪಾರ್ಷಿಯಲ್ ಆಗಿ ಎನ್‌ಕ್ವೈರಿ ಮಾಡುತ್ತಾರೆ. ಇಲ್ಲದಿದ್ದರೆ ನಾಳೆ ಸರ್ಕಾರ ಇನ್‌ಫ್ಲುಯೆನ್ಸ್ ಮಾಡಬಹುದು ಎಂಬ ಆರೋಪ ಬರುತ್ತದೆ. ಈಗಾಗಲೇ ತಾವೇ ಮುನಿಸಿಪಲ್ ಅಧ್ಯಕ್ಷರು ಆ ದಿವಸ ಅಲ್ಲಿರಲಿಲ್ಲ ಎಂದು ಹೇಳಿ ಡಿಫೆಂಡ್ ಮಾಡಿಕೊಂಡಿರಿ. ಮೊಟ್ಟಮೊದಲನೆಯದಾಗಿ ರೌಡಿಯನ್ನು ನೀವೇ ಡಿಫೆಂಡ್ ಮಾಡುವಾಗ, ನ್ಯಾಚುರಲಿ ಈ ಮಾತನ್ನು, ಈ ಸದನದಲ್ಲಿ ತಾವು ಆಡಿದ ಮಾತನ್ನೂ ಕೂಡ ಸಿ.ಒ.ಡಿ.ಯವರೂ ಕೂಡ ತೆಗೆದುಕೊಳ್ಳುತ್ತಾರೆ, ಏಕೆಂದರೆ ಮಾನ್ಯ ಮಂತ್ರಿಗಳೇ ಇದನ್ನು ಹೇಳಿದ್ದಾರೆ ಅಲ್ಲಿರತಕ್ಕಂತಹ ಮುನಿಸಿಪಾಲಿಟಿ ಅಧ್ಯಕ್ಷರು ಅಲ್ಲಿ ಇರಲಿಲ್ಲ, ಆದ್ದರಿಂದ ಏಕೆ ನಾವು ಅವನನ್ನು ಕೇಳಬೇಕು ಅಥವಾ ಅವನನ್ನು ಇನ್‌ವಾಲ್ವ್ ಮಾಡಬೇಕು ಎಂದು ಹೇಳುತ್ತಾರೆ. ಇನ್‌ವಾಲ್ವ್ ಆಗಿದ್ದಾನೋ ಇಲ್ಲವೋ ಆ ಮಾತು ಬೇರೆ. ಇದನ್ನು ಕೇಳಲಿಕ್ಕೂ ಕೂಡ ಸಿ.ಒ.ಡಿ.ಯವರು ಮುಜುಗರ ಮಾಡಿಕೊಳ್ಳುತ್ತಾರೆ. ಎರಡನೆಯದಾಗಿ, ನಾನು ಯಾವ ಜಾತಿ ಆಫೀಸರ್ ಏನು ಅಂತ ನಾನು ಕೇಳಲೇ ಇಲ್ಲ. ನಾನು ಅದನ್ನು ಕೇಳುವುದಕ್ಕೂ ಹೋಗುವುದಿಲ್ಲ. ಏಕೆಂದರೆ ಎಷ್ಟೋ ಕಡೆ ಗಲಾಟೆ ಏನು ಆಗುತ್ತವಲ್ಲ, ಯಾರು ಗಲಾಟೆ ಮಾಡಿಸುವವರು ಇರುತ್ತಾರೆ ನೋಡಿ, ಅವರೆಂದೂ ಹೊಡೆಯುವುದಿಲ್ಲ, ಅವರು ಬೇರೆಯವರಿಂದ ಹೊಡೆಸುತ್ತಾರೆ ಸಿ.ಒ.ಡಿ.ಯವರು ಅನೇಕ ಹಳ್ಳಿಗಳಲ್ಲಿ ದಬ್ಬಾಳಿಕೆ ಆಗುವುದು, ಹೊಡೆದಾಟವಾಗುವುದು, ಖೂನಿಗಳಾಗುವುದು ಯಾರು ಎಂದು ಕಂಡು ಹಿಡಿಯಲಿಕ್ಕಾಗುವುದಿಲ್ಲ. ಬಡವರು ಬಡವರಿಗೇ ಹೊಡೆಯುತ್ತಾರೆ. ಹೊಡೆಸುವವರು ಬೇರೆಯವರಿರುತ್ತಾರೆ. ಅವರು

ಎಲ್ಲೋ ಒಂದು ಲಾಡ್ಜ್‌ನಲ್ಲಿ ಇರುತ್ತಾನೆ, ಬೆಂಗಳೂರಿನಲ್ಲಿ ರೇಸ್ ಆಡಿಕೊಂಡು ಅಥವಾ ಇನ್ನೊಂದು ಕಡೆ ಎಲ್ಲಿಯಾದರೂ ಸಿಟಿಯಲ್ಲಿ ಅವನು ಕುಳಿತುಕೊಂಡಿರುತ್ತಾನೆ. ಅಲ್ಲಿ ಮರ್ಡರ್‌ಗಳಾಗುತ್ತವೆ, ಖೂನಿಗಳಾಗುತ್ತವೆ, ದರೋಡೆಗಳಾಗುತ್ತವೆ, ಲೂಟಿಗಳಾಗುತ್ತವೆ, ಇವೆಲ್ಲಾ ನಡೆಯುತ್ತಿರುತ್ತವೆ. ಇದು ಎಲ್ಲರಿಗೂ ಗೊತ್ತಿರುತ್ತದೆ. ನಾನೇನು ಬಿಡಿಸಿ, ಬಿಡಿಸಿ ಹೇಳಬೇಕಾಗಿಲ್ಲ. ತಮಗೆ ಕೂಡ ಗೊತ್ತಿರುತ್ತದೆ. ಹೀಗೆ ಅನೇಕ ಸಾರಿ ಕುಮ್ಮುಕ್ಕು ಕೊಡತಕ್ಕಂತಹ ಜನ ಹಿಂದೆ ಇರುತ್ತಾರೆ, ಹೊಡೆಯತಕ್ಕಂಥವರು, ಹೊಡೆದಾಡತಕ್ಕಂಥವರು ಬೇರೆ ಇರುತ್ತಾರೆ, ಅದಕ್ಕೆ ಆ ಜಾತಿ ಪ್ರಶ್ನೆ, ಇತ್ಯಾದಿ ಅಂಶಗಳು ಗಣನೆಗೆ ಬರುವುದಿಲ್ಲ. ಅನೇಕ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ಯಾವ ಸರ್ಕಾರ ಇತ್ತೋ, ಅಥವಾ ಯಾರ ಒಂದು ಇನ್‌ಫ್ಲುಯೆನ್ಸ್‌ನಿಂದ ಅವರು ಬಂದಿರುತ್ತಾರೋ, ಅವರ ಮಾತು ಕೇಳಿಕೊಂಡು ಕೆಲಸ ಮಾಡುವವರು ಇದ್ದಾರೆ.

ನಾನು ಆ ಗೋಜಿಗೆ ಹೋಗುವುದಿಲ್ಲ. ಅದಕ್ಕೆ ದಯವಿಟ್ಟು ಇದನ್ನು ಇಂಪಾರ್ಷಿಯಲ್ಲಾಗಿ ಎನ್‌ಕ್ವೈರಿ ಆಗಬೇಕೆಂದರೆ ಎರಡರಲ್ಲಿ ಒಂದು ಮಾತು ಮಾಡಿ. ಇಲ್ಲ ಜ್ಯುಡಿಷಿಯಲ್, ಇಲ್ಲ ಸಿ.ಓ.ಡಿ., ಮತ್ತು ಸದನ ಸಮಿತಿ ಹೇಳುವುದು ಎಂದರೆ ಎಸ್.ಸಿ. ಎಸ್.ಟಿ. ಕಮಿಟಿ ಆದರೂ ಕಳುಹಿಸಿ, ಇಲ್ಲ ಎಂದರೆ ಸದನ ಸಮಿತಿ ಆದರೂ ಮಾಡಿ ಕಳುಹಿಸಿ, ಏಕೆ ಎಂದರೆ, ಅಲ್ಲಿನ ವಾತಾವರಣ ಹಾಗೆ ಇದೆ. ಅದರ ಹಿನ್ನೆಲೆ ಏನು ಎಂದು ಈಗಾಗಲೇ ಅವರೂ ಕೂಡ ಹೇಳಿದರು. ಶ್ರೀಮಾನ್ ಪ್ರಕಾಶ್‌ಜಿಯವರು ಏನು ಹೇಳಿದರು, ಆ ಊರಮ್ಮನ ಜಾತ್ರೆ ಐದು ವರ್ಷಗಳಿಗೊಮ್ಮೆ ಆಗುತ್ತದೆ. ಅಲ್ಲಿ ಕೆಲವು ಪ್ರಿವಿಲೇಜಸ್ ಬಹುಶ: ಈ ಹರಿಜನರ ಪ್ರಿವಿಲೇಜ್, ಕೋಣ ಕೊಯ್ಯುವುದು ಏನು ಇದೆಯೋ ಗೊತ್ತಿಲ್ಲ. ಇವರಿವರ ಪ್ರಿವಿಲೇಜ್‌ಗೋಸ್ಕರ ಅಲ್ಲಿ ಜಗಳ ನಡೆಯಿತು ಅದನ್ನೂ ಕೂಡ ಸಮಾಧಾನ ಪಟ್ಟು ಒಂದಾಗಿ ಮಾಡಿದ್ದಾರೆಂದರೆ ನಿಜಾಂಶ ಏನು ಇದೆ ಅದು ಹಿಂದೆ ಏನು ಇತ್ತು ಅದು ಈಗ ಸ್ವಲ್ಪ ಹೊರಗಡೆ ಬಂದಿದೆ, ಅಂದರೆ ಯಾವ ಕಾರಣದಿಂದ ವೈಮನಸ್ಸು ಬೆಳೆಸಿಕೊಂಡು ಬಂದಿತು, ಹೇಗೆ ಇದು ಈ ಘಟನೆ ಪರಿವರ್ತನೆ ಆಯಿತು ಎನ್ನತಕ್ಕಂತಹ ವಿಷಯವನ್ನು ಸ್ವಲ್ಪ ಮಟ್ಟಿಗೆ ಅವರು ಬಿಚ್ಚಿ ಹೇಳಿದ್ದಾರೆ. ಇದು ಸಂಪೂರ್ಣವಾಗಿ ನಿಲ್ಲಬೇಕು, ಅದರ ಹಿನ್ನೆಲೆ ಏನು, ಸಾಮಾಜಿಕ ಬೆಳವಣಿಗೆ ಅಥವಾ ದ್ವೇಷ, ವೈಯುಕ್ತಿಕ ದ್ವೇಷ ಎನ್ನತಕ್ಕಂಥದ್ದು ಅಥವಾ ರಾಜಕೀಯ ಹಿನ್ನೆಲೆಯಲ್ಲಿ ಅಥವಾ ಇವರಿಗೆ ಬೇಕಾದವರಿಗೆ ಡಿಫೈನ್ ಮಾಡಬೇಕೆಂದು ಹೇಳಿ, ನಿಮಗೆ ಡಿಫೈನ್ ಮಾಡಬೇಕೆಂದು ಏನಾದರೂ ಬೇರೆ ಪೊಲಿಟಿಕಲ್ ಪಾರ್ಟೀಸ್ ಈ ರೀತಿಯಾಗಿ ಮಾಡುತ್ತಾರೆ ಎನ್ನತಕ್ಕಂಥದ್ದು ಹೊರಗೆ ಬರುತ್ತದೆ. ಅದಕ್ಕಾಗಿ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಇವೆರಡರಲ್ಲಿ ಒಂದು ತಾವು ಒಪ್ಪಿಕೊಳ್ಳಬೇಕು, ಇದರಲ್ಲಿ ಯಾವ ರಾಜಕೀಯ ದುರುದ್ದೇಶವಿಲ್ಲ, ಯಾರಿಗೆ ಕಳಂಕ ತರಬೇಕು ಅವರ ಹೆಸರನ್ನು ಕೆಡಿಸಬೇಕೆಂಬ ಇಚ್ಛೆ ನಮಗೆ ಇಲ್ಲ. ಹಾಗೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಹಾಗೆ ಮಾಡುವುದಾದರೆ ಅದೇ ದಿವಸ ನಾನು ಪ್ರಸ್ತಾಪ ಮಾಡುತ್ತಿದ್ದೆ. ಆದರೆ ತಾವು ಈ ಸ್ಟೇಟ್‌ಮೆಂಟ್ ಮೊದಲು ಮಾಡಬೇಕೆಂದು ಹೇಳಿದ ಮೇಲೆ ಇವತ್ತು ನಾನು ಇದನ್ನು

ಎತ್ತಿದ್ದೇನೆ. ನಿನ್ನೆ ಎತ್ತಬೇಕಾಗಿತ್ತು, ಆದರೆ ಇವತ್ತು ಅವರು ಸಮಯ ಕೊಟ್ಟಿದ್ದಕ್ಕೆ ಇವತ್ತು ಎತ್ತಿದ್ದೇನೆ. ಇದು ಪೊಲಿಟಿಕಲ್ ಮೋಟಿವೇಟೆಡ್ ಇದೆ, ಅಲಿಗೇಷನ್ ಮಾಡಬೇಕೆಂದು ಮಾಡುತ್ತಿಲ್ಲ. ಅದಕ್ಕೆ ದಯವಿಟ್ಟು ತಾವು ಒಪ್ಪಿಕೊಳ್ಳಬೇಕೆಂದು ಪುನಃ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರು ಇದಕ್ಕೆ ಸ್ಪಂದಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಇಂತಹ ಘಟನೆಗಳು ನಡೆಯಬಾರದು ಎಂದು ಹೇಳತಕ್ಕಂಥದ್ದು ನಾವು ಒಪ್ಪುತ್ತೇವೆ. ಈ ಘಟನೆಗಳು ನಡೆಯಲಿಕ್ಕೆ ಇರತಕ್ಕಂತಹ ಹಿನ್ನೆಲೆ ಏನು ಎಂದು ಹೇಳತಕ್ಕಂಥದ್ದರ ಬಗ್ಗೆ ವಿಚಾರಣೆ ಮಾಡಬೇಕು ಎನ್ನತಕ್ಕಂಥದ್ದು ಒಂದು ನಮ್ಮ ಮುಂದಿರುವ ಪ್ರಶ್ನೆ. ಯಾರ ಮುಖಾಂತರ ಇದು ನಡೆಸಬೇಕು, ನಮ್ಮ ಎರಡು ಸದನಗಳ ಸಮಿತಿ Standing Committee on the Welfare of SC/ST..... ಸಿ.ಓ.ಡಿ. ಎನ್‌ಕ್ವೈರಿ ಒಂದು ಕಡೆ ನಡೆಯುತ್ತದೆ, ಕಾನೂನು ಭಾಗದಲ್ಲಿ ನಡೆಯಬೇಕಾಗಿರತಕ್ಕಂಥ ಸಿ.ಓ.ಡಿ. ಎನ್‌ಕ್ವೈರಿಗೆ ಸರ್ಕಾರ ಈಗಾಗಲೇ ಆದೇಶ ಮಾಡಿದೆ. ಅದು ನಡೆಯುತ್ತಿದೆ, ಇನ್ನು ಒಂದು ಭಾಗದಲ್ಲಿ ನಮ್ಮ ಎರಡು ಸದನಗಳ ಸಮಿತಿ ಇರತಕ್ಕಂಥದ್ದು, ಸ್ಟ್ಯಾಂಡಿಂಗ್ ಕಮಿಟಿ ಆನ್. ಎಸ್.ಸಿ. ಎಸ್.ಟಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸಿ.ಓ.ಡಿ. ಇಲ್ಲದೆ, ಸಿ.ಬಿ.ಐ.ಯಿಂದ ಮಾಡಿಸಿ ವ್ಯತ್ಯಾಸ ಏನಾಗುತ್ತದೆ? ವ್ಯತ್ಯಾಸ ನಾನು ಏಕೆ ಹೇಳಿದೆ ಎಂದರೆ ಲೋಕಲ್ ಇನ್‌ಫ್ಲ್ಯೂಯನ್ಸ್ ಇರುವುದರಿಂದ ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಖರ್ಗೆಯವರೇ ನಮ್ಮ ಎರಡೂ ಸದನದ ಸದಸ್ಯರು ಇರತಕ್ಕಂತಹ Standing Committee on the Welfare of SC/ST ಇದಕ್ಕಿಂತ ದೊಡ್ಡದಾದ ಸಮಿತಿ ಇನ್ನೊಂದು ಹುಟ್ಟುತ್ತದೆ ಎಂದು ನನಗೆ ಅನ್ನಿಸುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ರಿಪೋರ್ಟ್ ಕೊಡುತ್ತಾರೆ ಹೊರತಾಗಿ ಇನ್‌ವೆಸ್ಟಿಗೇಷನ್ ಮಾಡುವುದಿಲ್ಲ, ಇನ್‌ವೆಸ್ಟಿಗೇಷನ್ ಮಾಡಿ ಕೇಸ್ ಹಾಕುವುದಿಲ್ಲ.

SRI M.C.NANAIAH:- Most appropriate is Standing Committee on SC/ST..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಲ್ಲಿ ವಸ್ತು ಸ್ಥಿತಿ ಏನು ಇದೆ, ಸೋಷಿಯಲ್ ಬ್ಯಾಕ್‌ಗ್ರೌಂಡ್ ಏನು ಇದೆ? ಈ ಘಟನೆ ಏಕೆ ನಡೆಯಿತು ಎನ್ನತಕ್ಕಂಥದ್ದರ ಬಗ್ಗೆ ನೋಡಿಕೊಂಡು ಬರುತ್ತಾರೆಯೇ ಹೊರತಾಗಿ ಅವರು ಛಾರ್ಜ್ ಶೀಟ್ ಹಾಕಿ ಎಫ್.ಐ.ಆರ್. ಹಾಕಿ ಈ ರೀತಿಯಾಗಿ ಮಾಡಬೇಕು ಎನ್ನತಕ್ಕಂಥವರು ಅಲ್ಲ. ಅದಕ್ಕೆ ಇದು ಒಂದು ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿ ಇದ್ದ ಹಾಗೆ, ರಿಪೋರ್ಟ್ ತರುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ:- ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯಲ್ಲಿ ಅವರು

ಮಾಡಿರತಕ್ಕಂತಹ ಶಿಫಾರಸ್ಸು ಏನೇ ಇದ್ದರೂ ಆ ಶಿಫಾರಸನ್ನು ಸರ್ಕಾರ ಒಪ್ಪುತ್ತದೆ, ಅದಕ್ಕನುಗುಣವಾಗಿ ಸರ್ಕಾರ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತದೆ. ಆದ್ದರಿಂದ ಈ ಕೆಲಸ ಮಾಡುವುದಕ್ಕೆ ಸಿದ್ಧ ಇದೆ ಎಂದು ಹೇಳಿ ದಯವಿಟ್ಟು ಮಾನ್ಯ ಮಿತ್ರರಾದ ಖರ್ಗೆಯವರು ಇದಕ್ಕೆ ಒಪ್ಪಬೇಕೆಂದು ಹೇಳಿ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜನ ಖರ್ಗೆ:- ಅಧ್ಯಕ್ಷರೆ, ಸಿ.ಓ.ಡಿ.ಗೆ ಅವರು ಯಾವಾಗ ಒಪ್ಪಿಕೊಂಡಿದ್ದಾರೆ ಎಂದರೆ ಸಿ.ಬಿ.ಐ.ಗೆ ಹಾಕಿ this is very imporant Sir. ಏಕೆಂದರೆ ಬೆಳೆಸತಕ್ಕಂತಹ ಜನ ಇದ್ದಾರೆ. ಅವರು ಹೇಳಿದ ಹಾಗೆ ಇದು ಅನೇಕ ರೀತಿಯಿಂದ ಬೆಳೆದುಕೊಂಡು ಹೋಗುತ್ತದೆ. ಇದಕ್ಕೆ ಇತಿಶ್ರೀ ಹಾಡಬೇಕು, ಆದ್ದರಿಂದ ಇಲ್ಲ ಡಿಸ್ಮಿಕ್ಟ್ ಜಡ್ಜ್‌ನಿಂದ ಜುಡಿಷಿಯಲ್ ಪ್ರೋಬ್ ಮಾಡಿಸಿ, ಇಲ್ಲ ಸಿ.ಬಿ.ಐ.ಗೆ ರೆಫರ್ ಮಾಡಿ. ಇಲ್ಲದಿದ್ದರೆ ಇದು ಬೆಳೆದುಕೊಂಡು ಹೋಗುತ್ತದೆ. ಬೆಳೆಸುವವರಿದ್ದಾರೆ. ನೀವು ನಿಮ್ಮ ಭಾಷಣದಲ್ಲಿ ಹೇಳಿದಿರಿ, ನಾವು ಅನೇಕ ಸಾರಿ ನಿಮ್ಮ ಕನ್ನಡವನ್ನು ಟ್ರಾನ್ಸ್‌ಲೇಷನ್ ಮಾಡಿಕೊಳ್ಳಬೇಕಾಗುತ್ತದೆ. ಹೈದರಾಬಾದ್, ಕರ್ನಾಟಕ ಭಾಷೆಯಲ್ಲಿ, ಅದಕ್ಕೆ ಅಧ್ಯಕ್ಷರೆ, ಇದನ್ನು ನೀವು

MR.SPEAKER:- I know you are a well wisher of Mr.Prakash..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಂಪಾರ್ಷಿಯಲ್ ಆಗಿ ಯಾರೇ ಒಳ್ಳೆಯ ಕೆಲಸ ಮಾಡಿದರೂ ಅವರು ಸದನದಲ್ಲಿ ಎಲ್ಲರಿಗೂ ವೆಲ್ ವಿಶರ್ಸ್ unless they change their attittude.. ಅದಕ್ಕೆ ದಯವಿಟ್ಟು ಇದನ್ನು ಸಿ.ಬಿ.ಐ.ಗೆ ಇಲ್ಲ ಎಂದರೆ ಜ್ಯುಡಿಷಿಯಲ್‌ಗೆ ರೆಫರ್ ಮಾಡಿ ಇದರಲ್ಲಿ ಹಠ ಮಾಡಬೇಡಿ, ಇದರಲ್ಲಿ ಪ್ರಿಸ್ಟೀಜ್ ಬೇಡ ಇದು ಕ್ಲೋಸ್ ಆಗುತ್ತದೆ, ಬೇರೆಯವರೂ ಬಾಯಿ ಹಾಕತಕ್ಕಂಥದ್ದಾಗಲಿ, ಪದೇ ಪದೇ ನಾವು ಮತ್ತೆ ಈ ಸದನದಲ್ಲಿ ಹಠ ಹಿಡಿಯತಕ್ಕಂಥದ್ದು ಮಾಡಬೇಡಿ.

ಅಧ್ಯಕ್ಷರು:- ನೀವು ಏನಾದರೂ ಮಾಡಿ Please save time of the House. That is My apprehension.....

ಶ್ರೀ ಎಂ.ಸಿ.ನಾಣಯ್ಯ:- ಜಂಟಿ ಸದನ ಸಮಿತಿ ಯಾವುದು ಇದೆ, ಇದಕ್ಕಿಂತ ಉತ್ತಮವಾದ ಸಿ.ಬಿ.ಐ. ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ನಾನು ಖಂಡಿತವಾಗಿ ತಯಾರಾಗಿಲ್ಲ. ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಇದೆ ಕ್ರಾಸ್ ಕ್ವಶ್ಚನ್ ಮಾಡುವುದಕ್ಕೆ ಸಿ.ಓ.ಡಿ.ಗೆ ಅದು ಕೊಟ್ಟಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸಿ.ಓ.ಡಿ.ಗೆ ಏಕೆ ಕೊಟ್ಟಿದ್ದೀರಿ? ಅದು ಸಿ.ಬಿ.ಐ.ಗಿಂತ ಬೆಟರ್ ಇದೆಯಾ?

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ನಿಲುವನ್ನು ಸ್ಪಷ್ಟ ಮಾಡಿದ್ದೇವೆ, ಇದರ ಜೊತೆಯಲ್ಲಿ ಮಾನ್ಯ ಖರ್ಗೆಯವರು ಹೇಳಿರತಕ್ಕಂತಹ ವಿಚಾರದಲ್ಲಿ ಕೂಡ ಎಸ್.ಸಿ. ಎಸ್.ಟಿ. ಕಮಿಟಿ ಇದೆ, ಅದಕ್ಕೆ ಮಾನ್ಯ ಸಭಾಧ್ಯಕ್ಷರೆ ಇದನ್ನು ನೇರವಾಗಿ ವಹಿಸಲಿ, ಅವರು ಹೋಗಿ ಸಮಗ್ರವಾಗಿ ವಿಚಾರಣೆ ಮಾಡಲಿ, ಸದನಕ್ಕೆ ವರದಿ ಕೊಡಲಿ ಅವರು ಕೊಟ್ಟಿರತಕ್ಕಂತಹ ಶಿಫಾರಸ್ಸನ್ನು ಸರ್ಕಾರ ಅಂಗೀಕಾರ ಮಾಡಿ ಅದಕ್ಕೆ ಪೂರಕವಾಗಿ ನಾವು ಕಾರ್ಯತತ್ಪರರಾಗುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ನಾನು ಹಟ ಹಿಡಿಯಬೇಕೆಂದು ಅಲ್ಲ, ಯಾವುದರ ಮೇಲೂ ಕೂಡ ಅನಾವಶ್ಯಕವಾಗಿ ಹಠ ಹಿಡಿಯಬೇಕು ಹಠ ಹಿಡಿದು ಪದೇ ಪದೇ ಅಡ್ಡಿ ಮಾಡಬೇಕೆಂದು ಅಲ್ಲ. ಬಹಳ ಗಂಭೀರವಾದ ವಿಷಯ ಆದ ಕಾರಣ ಮತ್ತು ಅವರಿಗೆ ಏನು ಜ್ಯುಡಿಷಿಯಲ್ ಪ್ರೋಬ್‌ಗೆ ಒಪ್ಪಿಕೊಳ್ಳುವುದಕ್ಕೆ ಏನಾಗಿದೆ, ಸಿ.ಓ.ಡಿ. ಮಾಡುವುದಕ್ಕಿಂತ ಸಿ.ಬಿ.ಐ.ಗೆ ಒಪ್ಪಿಕೊಳ್ಳಿ. There is nothing.. ಅವರೇ ರೆಫರ್ ಮಾಡುತ್ತಾರೆ, ಯಾರ್ಯಾರು ಜಡ್ಜಸ್ ಬೇಕು ಅವರಿಗೆ ಅಪಾಯಿಂಟ್ ಮಾಡುವವರು ಅವರೆ, ಟರ್ಮ್ಸ್ ಆಫ್ ರೆಫರೆನ್ಸ್ ಅದನ್ನು ನಾವು ಕೊಟ್ಟಿದ್ದನ್ನು ಮಾಡುತ್ತಾರೆ. ಅದರ ಒಳಗೆ ನಿಸ್ಪಕ್ಷಪಾತವಾಗಿ ಏನು ರಿಪೋರ್ಟ್ ಬರುತ್ತದೆ ಅದನ್ನು ಎಲ್ಲರೂ ಒಪ್ಪಿಕೊಳ್ಳೋಣ once for all ಎಲ್ಲರ ಬಾಯಿ ಕ್ಲೋಸ್ ಆಗುತ್ತದೆ. ನೀವು ಸಿ.ಓ.ಡಿ.ಗೆ ಕೊಟ್ಟರೆ ಏನಾಗುತ್ತದೆ ಅಲ್ಲಿ ಪುನಃ ಅಲಿಗೇಷನ್ ಬರುತ್ತದೆ, ಏನೆಂದರೆ, ಸರ್ಕಾರ ಅವರದು ಸಿ.ಓ.ಡಿ.ನೂ ಅವರ ಮಾತು ಕೇಳುತ್ತಾರೆ, ಅದಕ್ಕಾಗಿ ದಯವಿಟ್ಟು ನೀವು ಹಠ ಹಿಡಿಯಬೇಡಿ.

ಶ್ರೀ ಎಂ.ಸಿ.ನಾಣಯ್ಯ:- ನನಗೆ ಅರ್ಥವಾಗುತ್ತಿಲ್ಲ, ಏನು ಹಠ ಎಂದು. ಬಹುಶ: ಇಂತಹ ಪ್ರತಿಯೊಂದು ಘಟನೆಗಳಿಗೂ ನಾವು ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಒಪ್ಪಿದರೆ ಇದು ಆದಮೇಲೆ ನಿನ್ನೆ ಮೇಲ್ಮನೆಯಲ್ಲಿ ಇನ್ನೊಂದು ಪ್ರಶ್ನೆ ಬಂದಿತ್ತು ಬಳ್ಳಾರಿಯಲ್ಲಿ ನಡೆದಿರತಕ್ಕಂತಹ ಯಾವ ಪ್ರತಿಮೆ ಭಗ್ನ ಮಾಡಿದರು ಅದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಿ ಎಂದು ಹೇಳುತ್ತಿರತಕ್ಕಂತಹ ಪ್ರಶ್ನೆ ನೆನ್ನೆ ಬಂದಿತ್ತು, ನಾನು ಹೇಳುತ್ತೇನೆ, ಎಲ್ಲೋ ಒಂದು ಭಾಗದಲ್ಲಿ ನಾವು ಶಾಂತ ಪರಿಸ್ಥಿತಿಯನ್ನು ಮಾಡಿ ಆದಮೇಲೆ ಪುನಃ ಇದನ್ನೇ ಬೆಳೆಸಿಕೊಂಡು ಹೋಗತಕ್ಕಂಥದ್ದು ಸರಿಯಲ್ಲ ಎನ್ನತಕ್ಕಂತಹ ಮಾತನ್ನು ನಿನ್ನೆ ಹೇಳಿ, ಇದು ಒಂದು ಪ್ರಕರಣವನ್ನು ಸಿ.ಓ.ಡಿ.ಗೆ ತನಿಖೆಗೆ ಒಪ್ಪಿಸುತ್ತೇವೆಂದು ನಾವು ಇದನ್ನು ಒಪ್ಪಿದ್ದೇವೆ. ಅದನ್ನೇ ಇವತ್ತೂ ಕೂಡ ಈ ಮನೆಯಲ್ಲಿ ಹೇಳುತ್ತೇನೆ, ಇದರ ಬಗ್ಗೆ ಅವರು ಕೊಟ್ಟಿರತಕ್ಕಂತಹ ಸಲಹೆ ಕೂಡ ಸರಿ, ನಮ್ಮ ಸದನದ ಸ್ಥಾಯಿ ಸಮಿತಿ ಇದೆ, ಆ ಸ್ಥಳಕ್ಕೆ ಎಲ್ಲರೂ ಹೋಗಿ ಆ ಕೆಲಸವನ್ನು ಮಾಡಲಿಕ್ಕೆ, ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಿತ್ರರಾದ ಖರ್ಗೆಯವರು ಇದನ್ನು ಪ್ರತಿಷ್ಠೆಯ ಮೇಲೆ ನಿಲ್ಲುವುದು ಬೇಡ, ಸರ್ಕಾರ ಪ್ರತಿಷ್ಠೆ ಮೇಲೆ ಯಾವಾಗಲೂ ನಿಂತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಇದನ್ನು ಮಾಡಲಿ

ಎಂದು ನಾನು ಆಗಲೇ ಹೇಳಿದೆ.

ಶ್ರೀ ಎಂ.ಸಿ.ನಾಣಯ್ಯ:- ಒಂದು ಸ್ಟ್ಯಾಂಡಿಂಗ್ ಕಮಿಟಿ ಆನ್ ಎಸ್.ಸಿ. ಎಸ್.ಟಿ. ಏನಿದೆ, ಅದಕ್ಕೆ ಇದನ್ನು ಒಪ್ಪಿಸಲು ಸಿದ್ಧರಿದ್ದೇವೆ ಅವರು ಕೊಡತಕ್ಕಂತಹ ಎಲ್ಲಾ ಸಲಹೆ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪುತ್ತದೆ. ಆದ್ದರಿಂದ ಇದಕ್ಕೆ ಅವರು ಒಪ್ಪಬೇಕೆಂದು ತುಂಬ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸರ್ಕಾರ ಇದನ್ನು ಮಾತ್ರ ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎನ್ನತಕ್ಕಂತಹ ವಿಚಾರವಿಲ್ಲ, ಆದ್ದರಿಂದ, ನಾನು ನಿಮ್ಮ ಆ ಸಲಹೆಯೊಂದನ್ನು ಬಿಟ್ಟು ಬಾಕಿ ಎಲ್ಲಾ ಸಲಹೆಗಳನ್ನು ಒಪ್ಪಿದ್ದೇನೆ. ಆ ಸಲಹೆಗೆ ನಾವು ಒಪ್ಪುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಇದು ಸಾಮಾಜಿಕ ಘರ್ಷಣೆ, ಇದು ಇಬ್ಬರ ಗುಂಪಿನಲ್ಲಿ ಆಗತಕ್ಕಂಥದ್ದು ಅಲ್ಲ ಅದಕ್ಕೆ ಇದರ ಹಿನ್ನೆಲೆಯನ್ನು ನಾವು ತಿಳಿದುಕೊಳ್ಳಬೇಕು, ಎಂದರೆ ನೀವು ಇಂಪಾರ್ಷಿಯಲ್ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಕೇಳಿದ್ದು ಇದು ಯಾರೋ ಇಬ್ಬರು ಕಚ್ಚಾಡಿದ್ದರೆ ಅದಕ್ಕೆ ಜ್ಯುಡಿಷಿಯಲ್ ಪ್ರೋಬ್ ಕೇಳುತ್ತೇವಾ? ಅಥವಾ ಯಾರೋ ಎಲ್ಲೋ ರಸ್ತೆಯ ಮೇಲೆ ಹೊಡೆದಾಡಿದರೆ ಕೇಳುತ್ತೇವಾ? ಇಲ್ಲಿ ಏನು ನಡೆದಿದೆ ಎಂದರೆ, ಇಡೀ ಒಂದು ಸಮಾಜ ಒಂದು ಕಡೆ ಮತ್ತು ಆ ಸಮಾಜದ ಮೇಲೆ ಎಲ್ಲೋ ಒಂದು ಸಿನಿಮಾ ಥಿಯೇಟರ್‌ನಲ್ಲಿ ಗಲಭೆ ಆಗಿದೆ ಎದು ತಿಳಿದುಕೊಂಡು ದಾಳಿ ಮಾಡಿ ಒಂದು ಕಿ.ಮಿ. ಎರಡು ಕಿ.ಮಿ.ನಲ್ಲಿ ಇರತಕ್ಕಂತಹ ಸ್ಟ್ಯಾಚ್ಯೂವನ್ನು ಡೆಸ್ಟ್ರಾಯ್ ಮಾಡಿ ಆ ಒಂದು ಆ್ಯಟ್ಟಿಟ್ಯೂಡ್ ಏನು ಬೆಳೆಯುತ್ತಿದೆ, ಅದಕ್ಕೆ ಕಾರಣ ಏನು? ಅದಕ್ಕೆ ಹಿನ್ನೆಲೆ ಸ್ವಲ್ಪ ಹೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳು ವಿವರವಾಗಿ ಹೇಳಿದರು. ಅದಕ್ಕೆ ಆ ವಿಚಾರ ಹೊರ ಬಂದರೆ ಆ ವ್ಯವಸ್ಥೆಯನ್ನು ನಾವು ಯಾವ ರೀತಿಯಾಗಿ ಸುಧಾರಣೆ ಮಾಡಬಹುದು ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ಅದಕ್ಕೆ ದಯವಿಟ್ಟು ಇದರಲ್ಲಿ ಸ್ವಲ್ಪ ಆಸಕ್ತಿ ವಹಿಸಿ ಅವರ ಮನವೊಲಿಸಿ ಮಾಡಿಸಿಕೊಡಿ ಏಕೆಂದರೆ ಇಲ್ಲಿ ಎಲಕ್ಟ್ರಿಸಿಟಿ ವಿಚಾರ ಚರ್ಚೆ ಆಯಿತು. ಕಾವೇರಿ ನದಿ ನೀರಿನ ಚರ್ಚೆ ಆಯಿತು, ಇದನ್ನು ಒಂದು ಇಡೀ....

ಅಧ್ಯಕ್ಷರು:- ನನಗೆ ಬೇರೆ ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ. I have understood the seriousness. I am not undermining the seriousness...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ವಿಷಯದಲ್ಲಿ ಅತ್ಯಂತ ಮಹತ್ವ ಇದೆ, ಏಕೆಂದರೆ ಇದು ಸಮಾಜದ ಒಂದು ಜನ ನೊಂದು ಜನರಿಗೆ ಒಂದು.....

ಒಬ್ಬ ಮಾನ್ಯ ಸದಸ್ಯರು:- ಅದಕ್ಕಿಂತ ಮುಂಚೆ ಎಸ್.ಸಿ. ಎಸ್.ಟಿ. ಮಾಡಿದ್ದಾರೆ, ಎಸ್.ಸಿ. ಎಸ್.ಟಿ. ಕಮಿಟಿ ಇದೆ ಅದೇ ಗದ್ದಲ ಆಗಿದೆ ಎಸ್.ಸಿ. ಎಸ್.ಟಿ. ಕಮಿಟಿಯವರು ಅನೇಕ ಸಾರಿ ಸರ್ಕಾರಕ್ಕೆ ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್:- ಅಧ್ಯಕ್ಷರೇ ನಾನು ಇನ್ನು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಲಾಗುವುದಿಲ್ಲ ಏಕೆಂದರೆ ಇದು ನೇರವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾಗಿದೆ. ವಿಷಯವನ್ನು ತಿಳಿಸಿದ್ದೇನೆ. ಆದರಲ್ಲಿ ಅಲ್ಲಿಯ ಡಾ:ಅಂಬೇಡ್ಕರ್ ಸಂಘ, ದಲಿತ ಸಂಘರ್ಷ ಸಮಿತಿ ಬಳ್ಳಾರಿ ಜಿಲ್ಲೆಯವರು ಮತ್ತು ಬೇರೆ ಬೇರೆ ಕಡೆಗೆ ಆಗಿರತಕ್ಕಂಥ ಘಟನೆಯಲ್ಲಿ ಕೂಡ ಈ ಬೇಡಿಕೆಯನ್ನು ಇಟ್ಟಿಲ್ಲ. ಪೋಲೀಸ್‌ನವರು ಮಾಡಿರುವಂಥ ವಿಚಾರಣೆ ಮತ್ತು ಅವರು ತಪ್ಪಿತಸ್ಥರ ಮೇಲೆ ಅವರು ತೆಗೆದುಕೊಂಡಿರತಕ್ಕಂಥ ಕ್ರಮದ ಬಗ್ಗೆ ಯಾವುದೇ ಮಾತನ್ನು ಹೇಳಿಲ್ಲ. ತಮಗೆ ಹೇಳುವುದಾದರೆ ಹಡಗಲಿ ತಾಲ್ಲೂಕಿನ ಇಟಗಿ ಶಾಖೆಯಲ್ಲಿ ಈ ಕೃತ್ಯಕ್ಕೆ ಮುಖ್ಯ ಕಾರಣವಾಗಿದ್ದ ಗದಗಿ ಈರಣ್ಣನಿಗೆ ಗಡಿಪಾರಾಗಬೇಕು, ನಿಷ್ಪ್ರಯೋಜಕರಾದ ಪಿ.ಎಸ್.ಐ.ರವರನ್ನು ಅಮಾನತ್ತಿನಲ್ಲಿಡಬೇಕು, ನೈತಿಕ ಹೊಣೆಯನ್ನು ಹೊತ್ತು ಎಂ.ಪಿ.ಪ್ರಕಾಶ್ ರಾಜೀನಾಮೆಯನ್ನು ಕೊಡಬೇಕು. ಪುನಃ ಪ್ರತಿಮೆ ಪ್ರತಿಷ್ಠಾಪನೆ ಆಗಬೇಕು ಹಾಗೂ ಅಂಬೇಡ್ಕರ ಭವನ ನಿರ್ಮಾಣ ಆಗಬೇಕು. ಹಾಗೆಯೇ ಹೊಸಪೇಟೆ ಅಂಬೇಡ್ಕರ್ ಸಂಘದ ಬೇಡಿಕೆ ಕೂಡ ಈಗ ನಾಶವಾಗಿರುವ ಡಾ:ಅಂಬೇಡ್ಕರ್ ಭವನ ಸ್ಥಳದಲ್ಲಿ ಕನಿಷ್ಪ ಐದು ಲಕ್ಷ ರೂಪಾಯಿ ವೆಚ್ಚದಲ್ಲಿ ಭವನ ನಿರ್ಮಿಸಬೇಕು. ಈ ಹೀನ ಕೃತ್ಯದಿಂದ ತೊಂದರೆಗೀಡಾದ ಹಲ್ಲೆಗೊಳಗಾದ ಹರಿಜನರಿಗೆ ಸೂಕ್ತ ರಕ್ಷಣೆ ಒದಗಿಸಬೇಕು. ಈ ಹೀನ ಕೃತ್ಯ ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಎಂ.ಪಿ.ಪ್ರಕಾಶ್‌ರವರು ಸ್ವಕ್ಷೇತ್ರವಾದ ಹೂವಿನ ಹಡಗಲಿಯಲ್ಲಿ ನಡೆದಿರುವುದರಿಂದ ನೈತಿಕ ಹೊಣೆಯನ್ನು ಹೊತ್ತು ಅವರು ರಾಜೀನಾಮೆಯನ್ನು ಕೊಡಬೇಕು ಅಲ್ಲಿರತಕ್ಕಂಥ ದಲಿತ ಸಂಘರ್ಷ ಸಮಿತಿಯಾಗಲೀ, ಬಳ್ಳಾರಿಯವರಾಗಲೀ ಎರಡು ಮೂರು ಬೇರೆ ಬೇರೆ ಸಂಘ ಸಂಸ್ಥೆಗಳವರಾಗಲೀ ನೈತಿಕ ಹೊಣೆಯನ್ನು ಹೊತ್ತು ನಾನು ರಾಜೀನಾಮೆಯನ್ನು ಕೊಡಬೇಕೆಂದು ಕೇಳಿದ್ದಾರೆಯೇ ವಿನಹ ಪೋಲೀಸ್‌ರವರ ವಿಚಾರಣೆಯಲ್ಲಿ ಅವರಿಗೆ ಅಪನಂಬಿಕೆ ಇದೆ ಎಂದು ಹೇಳಿಲ್ಲ. ಮತ್ತೆ ಈಗಾಗಲೇ ತಮಗೆ ಗೊತ್ತಿದೆ ಉಮ್ಮತ್ತೂರು ಮೊದಲಾದ ಘಟನೆಗಳಲ್ಲಿ ನಾವು ಸಿ.ಬಿ.ಐ.ರವರಿಗೆ ವಹಿಸಿದರೂ ಕೂಡ ಇಲ್ಲಿಯವರೆಗೆ ಅವರು ಚಾರ್ಜ್‌ಶೀಟ್ ಹಾಕಿಲ್ಲ. ಇದಾಗಿ ಸುಮಾರು ಮೂರು ವರ್ಷವಾಗಿದೆ. ಮತ್ತೆ ಇದೇ ತರ್ಕವನ್ನು ನಾವು ಮುಂದುವರಿಸುವುದಾದರೇ, ಪ್ರಧಾನ ಮಂತ್ರಿಗಳು ದೇವೇಗೌಡರಾಗಿದ್ದಾರೆ, ಜನತಾದಳ ಸರ್ಕಾರದಲ್ಲಿ ಎಂ.ಪಿ..ಪ್ರಕಾಶ್‌ರವರು ಮಂತ್ರಿಗಳಾಗಿರುವುದರಿಂದ ಅವರ ಮೇಲೆ ಪ್ರಭಾವ ಬೀರಬಹುದು ಎನ್ನುವ ತಾತ್ವಿಕವಾದ ಮಾತು ಬರಬಹುದು. ಈ ಹಿನ್ನಲೆಯಲ್ಲಿ ನಾವು ನಮ್ಮಲ್ಲಿ ಇರತಕ್ಕಂಥ ಪೋಲೀಸ್ ಅಧಿಕಾರಿಗಳ ಬಗ್ಗೆ ಅಷ್ಟರಮಟ್ಟಿಗೆ ಅಪನಂಬಿಕೆ ಇಡತಕ್ಕಂಥ ಪ್ರಶ್ನೆ ಇಲ್ಲ, ತಾವೇ ಆಯ್ಕೆ ಮಾಡಿರತಕ್ಕಂಥ ಅಧಿಕಾರಿಗಳನ್ನಾದರೂ ಸೂಚಿಸಬಹುದು. ಮತ್ತು ನಮ್ಮ ಸದನದ ಸಮಿತಿಯಾದ ಎಸ್‌ಸಿ ಎಸ್‌ಟಿ ಕಮಿಟಿಯವರು ಅಲ್ಲಿಗೆ ಹೋಗಿ ಒಂದು ಪ್ರತ್ಯೇಕವಾದ ವರದಿಯನ್ನು ಸಲ್ಲಿಸಿದರೆ ಅದು ಸೂಕ್ತ ಎಂದು ನಾನು ಭಾವಿಸಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸನ್ಮಾನ್ಯ

ನಾಣಯ್ಯನವನು, ಸಚಿವರು ಮಾನ್ಯ ಖರ್ಗೆಯವರು ಕುಳಿತು ಮಾಡನಾಡಬಹುದು.

ಅಧ್ಯಕ್ಷರು: ನೀವು ಬರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆಯಿತು ನಾನೂ ಬರುತ್ತೇನೆ ಕುಳಿತುಕೊಂಡು ಸೆಟಲ್ ಮಾಡೋಣ.

ಅಧ್ಯಕ್ಷರು:- ನೀವು ಎಲ್ಲಾ ಬಂದಮೇಲೆ ವಾಟಾಳರೂ ಬರಬೇಕು.

ಶ್ರೀ ವಾಟಾಳ್ ನಾಗರಾಜ್:- ನನ್ನನ್ನು ಕರೆದೆ ಕರೆಯುತ್ತೀರೆಂಬ ನಂಬಿಕೆ ಇದೆ. ಆದಕ್ಕೇಕೆ ತಲೆ ಕೆಡಿಸಿಕೊಳ್ಳಬೇಕು.

Mr.Speaker:- We will take a decision about it and now we will move on to next subject. ಹಾಗೆ ಮಾಡಬಹುದಲ್ಲ. ಆಮೇಲೆ ಸೇರಿ ಮಾತನಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಲ್ಲಿ ಹೋಗಿ ಕೂಡ ಅದೇ ಕೇಳುವುದಲ್ಲ. ನಾವು ಅದೇ ಕೇಳುವುದು ಅವರು ಅದೇ ಹೇಳುವುದು.

ಅಧ್ಯಕ್ಷರು:- ಛೇಂಬರ್‌ನಲ್ಲಿ ವಾಸ್ತು ಜೆನ್ನಾಗಿದೆ, ಎಲ್ಲಾ ಕೈಸೆಸ್ ಅಲ್ಲಿ ಸಾಲ್ವ್ ಆಗುತ್ತವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು ಜವಾಬ್ದಾರಿ ತೆಗೆದುಕೊಂಡ ಮೇಲೆ ನಿಮ್ಮ ಮೇಲೆ ನಂಬಿಕೆ ಇಟ್ಟು ಹಂಡ್ರೆಡ್ ಪರ್ಸೆಂಟ್ ಬರುತ್ತೇವೆ.

ಅಧ್ಯಕ್ಷರು:- ಡಾ:ಎಂ.ಪಿ.ಕರ್ಕಿಯವರು ಒಂದು ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ವಿಧಾನ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗಿರುವುದರಿಂದ ಇಲಾಖೆಗಳ ವಾರ್ಷಿಕ ವರದಿಗಳು ಆದಷ್ಟು ಬೇಗ ತಲುಪಿಸಿದರೆ ಸಮಗ್ರವಾದ ಚರ್ಚೆ ಮಾಡಲು ಅನುಕೂಲವಾಗುತ್ತದೆ. ಆದಕಾರಣ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಬೇಡಿಕೆಗಳ ಮೇಲೆ ಸ್ವಲ್ಪ ಹೆಚ್ಚು ಸಮಯ ಮಾಡಿಕೊಂಡಿದ್ದೇವೆ. ಆದಕಾರಣ ತಲುಪಿಸಲಾಗಲಿಲ್ಲ ಎಂದು ಕಾಣುತ್ತದೆ. ಆದರೂ ತಕ್ಷಣ ಇವೊತ್ತು ಸಾಯಂಕಾಲದೊಳಗಾಗಿ ವರದಿಗಳು ತಮಗೆ ತಲುಪುವ ಹಾಗೆ ಮಾಡುತ್ತೇನೆ. ಈಗ ಜುರಾಲಾ ಮೇಲೆ ಚರ್ಚೆ ಪ್ರಾರಂಭ ಮಾಡೋಣ. ಮೊಡಲನೆಯದಾಗಿ ಮಾನ್ಯ ವಿರೋಧಪಕ್ಷದ ನಾಯಕರನ್ನು ಕರೆಯುತ್ತೇನೆ. ಅದಕ್ಕೆ ಮೊದಲು ಒಂದೇ ಒಂದು ವಿಷಯವನ್ನು ಸದನದ ಗಮನಕ್ಕೆ ತಂದುಬಿಡುತ್ತೇನೆ. ಕೆಲವು ಮಾನ್ಯ ಸದಸ್ಯರುಗಳು ನನ್ನ ಕಣ್ಣಿಗೆ ಕಾಣುತ್ತಿಲ್ಲ. ಅವರ ಹೆಸರುಗಳು ಈ ರೀತಿ ಇವೆ ಓದಿಬಿಡುತ್ತೇನೆ

ಅರಗ ಜ್ಞಾನೇಂದ್ರ, ಅಪ್ಪಾಜಿ, ಬಾಬುರಾವ್ ಚಿಂಚನ್‌ನೂರ್,

ಹೆಚ್.ಡಿ.ಬಸವರಾಜ್, ಚವ್ಹಾಣ್ ರವರು ಇವ್ಹೊತ್ತು ಬಂದಿದ್ದಾರೆ, ಗಂಗಾಧರ್ ನಾಯಕ್, ಶ್ರೀಮತಿ ಡಿ.ಜಿ.ಹೇಮಾವತಿ, ಅವರೂ ಸಹಿತ ಇವ್ಹೊತ್ತು ಬಂದಿದ್ದಾರೆ. ಆರ್.ಎಂ.ಕಲೂತಿ, ಎಸ್.ಆರ್.ಕಾಶಪ್ಪನವರ್, ಎ.ಆರ್.ಕೃಷ್ಣಮೂರ್ತಿ ಮಹಾಂತ್‌ಶೆಟ್ಟರ್, ಡಾ:ಮಹೇಶ್‌ಚಂದ್ರ, ಮರಳು ಸಿದ್ಧಪ್ಪ ಮೋಹನ್ ಷಾ, ಹೆಚ್.ಎಸ್.ಪ್ರಕಾಶ್, ಪೂರ್ಣ ಮಾದಪ್ಪ, ಶ್ಯಾಮನೂರ್ ಶಿವಶಂಕರಪ್ಪ, ಸೋಮ್ಲಾ ನಾಯಕ್, ವಿಜಯಕುಮಾರ್ ಖಂಡ್ರೆ, ಬಾಳಾ ಸಾಹೇಬ್ ವಡ್ಡರ್, ಇದೇನಾಗುತ್ತದೆ ಅಟೆಂಡೆನ್ಸ್‌ನಲ್ಲಿ ಅವರ ಹೆಸರು ಇರುತ್ತದೆ ಆದರೆ ಅವರು ಇಲ್ಲಿ ಇರುವುದಿಲ್ಲ ನಾನು ಅವರ ಮನೆಗಳಿಗೆ ಫೋನ್ ಮಾಡಿಸುತ್ತಿದ್ದೇನೆ. ಒಂದು ವೇಳೆ ಪಕ್ಷದಲ್ಲಿ ಅವರಿಗೆ ಏನಾದರು ಕೆಲಸಗಳು ಇದ್ದರೆ, ಅವರಿಗೆ ಜವಾಬ್ದಾರಿ ವಹಿಸಿದ್ದರೆ ನನಗೆ ತಿಳಿಸಬೇಕು. ಅವರು ನನ್ನ ಕಣ್ಣಿಗೆ ಕಾಣದಿದ್ದರೆ ನನಗೆ ಆತಂಕ ಆದಕಾರಣ ಅವರೆಲ್ಲಾ ಒಳಗೆ ಬರುವ ಹಾಗೆ ಮಾಡಬೇಕು.

ಶ್ರೀ ಹೆಚ್.ಎನ್.ನಂಜೇಗೌಡ:- ತಮ್ಮ ದೃಷ್ಟಿಗೆ ಬೀಳದೇ ಇರುವ ಸದಸ್ಯರ ಹೆಸರನ್ನೇನೊ ಹೇಳಿಬಿಟ್ಟಿರಿ, ಆದರೆ ತಮ್ಮ ದೃಷ್ಟಿಗೆ ಬೀಳದೇ ಇರುವ ಮಂತ್ರಿಗಳ ಹೆಸರುಗಳನ್ನು ಹೇಳಿದ್ದಿರೋ?

ಅಧ್ಯಕ್ಷರು:- ತಾವು ಪ್ರಸ್ತಾಪ ಮಾಡಿದ್ದುದು ಒಳ್ಳೆಯದಾಯಿತು. ನಿನ್ನೆ ಸೂಚನೆ ಕೊಟ್ಟಿದ್ದೆ ಮಾನ್ಯ ನಾಣಯ್ಯನವರು ಯ್ಯಾರ್ಯಾರ್ಗೆ ಯಾವ ಯಾವ ದಿವಸ ಅಲಾಟ್ ಮಾಡಿದ್ದೇವೆಂದು ಒಂದು ಪಟ್ಟಿ ಕೊಟ್ಟಿದ್ದಾರೆ. ಈ ಪಟ್ಟಿಯಲ್ಲಿರತಕ್ಕಂಥ ಮಂತ್ರಿಗಳ ಪೈಕಿ ಇವ್ಹೊತ್ತು ವಿಧಾನ ಸಭೆಯಲ್ಲಿ ಏಳೆಂಟು ಜನ ಇಲ್ಲ. ಸಾಯಂಕಾಲದ ಒಳಗೆ ತಕ್ಷಣ ಅದನ್ನು ಕೂಡ ನಾನು ಅನೌನ್ಸ್ ಮಾಡುತ್ತೇನೆ. ಮತ್ತು ಮುಖ್ಯಮಂತ್ರಿಗಳಿಗೂ ಕೂಡ ಈ ವಿಚಾರವನ್ನು ತಿಳಿಸುತ್ತೇನೆ, ಇವ್ಹೊತ್ತು ನನ್ನ ಅನುಮತಿಯನ್ನು ಪಡೆದುಕೊಂಡು ಮೂರು ಜನ ಮಂತ್ರಿಗಳು ಹೋಗಿದ್ದಾರೆ. ಉಳಿದವರು ವಿಧಾನಸಭೆಗೆ ಅಲಾಟ್ ಮಾಡಿದ್ದರೂ ಬಂದಿಲ್ಲ ಹಾಗೂ ನನ್ನ ಅನುಮತಿಯನ್ನು ಕೂಡ ಪಡೆದುಕೊಂಡು ಹೋಗಿಲ್ಲ ಎಂದು ತಿಳಿಸುತ್ತೇನೆ. ಅದನ್ನು ಕೂಡ ಅಷ್ಟೇ ಗಂಭೀರವಾಗಿ ನಾನು ತಿಳಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಸಭಾಧ್ಯಕ್ಷರೇ, ತಾವು ಹೇಳಿದಂಥ ಹೆಸರುಗಳಿವೆ. ದಯಮಾಡಿ ಈ ಸಭೆಯಲ್ಲಿ ಹೆಚ್ಚು ಹೆಚ್ಚು ಕೆಲಸ ನಮಗೂ ಕೂಡ ಕೊಟ್ಟರೆ, ಮುಂದಿನ ಬೆಂಚಿಗಿಂತ ಹೆಚ್ಚು ತಮ್ಮ ದೃಷ್ಟಿಕೋನ ಹಿಂದಿನ ಬೆಂಚಿನ ಕಡೆಗೆ ಇದ್ದರೆ ನಾವು ಹೆಚ್ಚು ಪಾರ್ಟಿಸಿಪೇಟ್ ಮಾಡಲಿಕ್ಕೆ ಆಗುತ್ತದೆ.

ಅಧ್ಯಕ್ಷರು:- ನಿಮ್ಮ ಭಾವನೆ ಅರ್ಥವಾಯಿತು. ಅದನ್ನು ಗೌರವಿಸತ್ತೇವೆ. ಇದರ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಎಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆ ಕೆಲಸವನ್ನು ಮಾಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಯಾವ ಇಲಾಖೆಯ

ಬೇಡಿಕೆಯನ್ನು ಮಂಡಿಸಬೇಕೋ ಅದಕ್ಕೆ ಸಂಬಂಧಪಟ್ಟ ಸಚಿವರು ಬಂದಿಲ್ಲದಿದ್ದರೆ ಅವರ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೀರಿ.

ಅಧ್ಯಕ್ಷರು:- ಆಮೇಲೆ ಬಂದು ಮಂಡಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಬಸವರಾಜು ಅವರಿಗೆ ಟೈಪಾಯ್ಡ್ ಆಗಿದೆ ಅವರು ಆಸ್ಪತ್ರೆಯಲ್ಲಿದ್ದಾರೆ.

ಅಧ್ಯಕ್ಷರು:- ನನಗೆ ತಿಳಿಸಬೇಕಲ್ಲ, ಎಂ.ಸಿ.ಮನಗೂಳಿಯವರು ಬಂದಿಲ್ಲ, ಅವರ ಹೆಸರನ್ನು ನಾನು ಓದಿಲ್ಲ, ಒಂದು ವಿಧಾನ ಇದೆಯಲ್ಲ. ನನಗೆ ಬರೆದು ತಿಳಿಸಬೇಕು ಇಲ್ಲ ಎಂದರೆ ನನಗೆ ಹೇಗೆ ಗೊತ್ತಾಗುತ್ತದೆ.?

ಶ್ರೀ ವಾಟಾಳ್ ನಾಗರಾಜ್:- ಬೇಡಿಕೆಗಳನ್ನು ಮಂಡಿಸಬೇಕಾದರೆ ಯಾವಾಗ ಬೇಕಾದರೂ ಮಂಡಿಸಬಹುದೇ?

ಅಧ್ಯಕ್ಷರು:- ಕಾರ್ಯಕ್ರಮದ ಅನುಗುಣವಾಗಿ ಮಂಡಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ನಿನ್ನೆ ಕಾರ್ಯಕ್ರಮದ ಅನುಗುಣವಾಗಿ ತಾವು ಕರೆದಾಗ ಮಂತ್ರಿಗಳು ಇರಲಿಲ್ಲ. ಆ ಮೇಲೆ ತಾವು ಇಲ್ಲದಿರುವಾಗ ವಿತ್ತೀಯ ಕಾರ್ಯಕಲಾಪದ ಚರ್ಚೆ ತೆಗೆದುಕೊಂಡಿರುತ್ತಾರೆ.

ಅಧ್ಯಕ್ಷರು:- ಆ ದಿವಸದನ ಕಾರ್ಯಕಲಾಪ ಮುಗಿಯುವುದರೊಳಗಾಗಿ ಬಂದು ನನ್ನ ಅನುಮತಿಯನ್ನು ಪಡೆದು ಮಂಡಿಸಬಹುದು.

ಶ್ರೀ ವಾಟಾಳ್ ನಾಗರಾಜ್:- ಸಂತೋಷದ ವಿಚಾರ. ನಿನ್ನೆ ಏನಾಯಿತು ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು.....

ಅಧ್ಯಕ್ಷರು:- ನೀವು ಹೇಳುವ ಮಾತಿನ ಅರ್ಥ ನನಗೆ ಆಗಿದೆ. ನಾನು ಉತ್ತರ ಬೇರೆ ಕೊಟ್ಟಿದ್ದೆನೆ ಅದು ಬೇರೆ. ನೀವು ಏನು ಮಾತು ಹೇಳುತ್ತಿದ್ದೀರಿ ಅದರ ಹಿಂದೆ ಇರತಕ್ಕಂಥ ನೋವು ನನಗೆ ಅರ್ಥವಾಗಿದೆ. ಅದಕ್ಕೆ ಈಗಾಗಲೇ ನಾನು ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಆಯವ್ಯಯದ ಬಗ್ಗೆ ಪ್ರಾಥಮಿಕವಾಗಿ ಚರ್ಚೆಯಾಗುವಾಗ ಬಹಳ ಜವಾಬ್ದಾರಿಯಿಂದ ಇರಬೇಕು.

ಅಧ್ಯಕ್ಷರು:- ಸತ್ಯವಾದ ಮಾತು.

ಶ್ರೀ ವಾಟಾಳ್ ನಾಗರಾಜ್:- ಯಾವುದೇ ಬೇಡಿಕೆಯಾಗಲೀ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಬೇಕು, ಆದರೆ ನನಗನಿಸುತ್ತದೆ ಮುಖ್ಯಮಂತ್ರಿಗಳು ಇರಲಿಲ್ಲ, ಉಪಮುಖ್ಯಮಂತ್ರಿಗಳು ಇರಲಿಲ್ಲ ಇದರಿಂದ ಏನಾಗುತ್ತದೆ ಎಂದರೆ ಒಂದು ವಿರೋಧ ಪಕ್ಷವನ್ನು ಕಡೆಗಾಣಿಸಿದ ಹಾಗಾಗುತ್ತದೆ ಮಾನ್ಯ ವಿರೋಧ ಪಕ್ಷದ ನಾಯಕರ

ಹಕ್ಕು ಏನು ಇದೆ ಅದಕ್ಕೆ ಚ್ಯುತಿ ಬಂದ ಹಾಗೆ ಆಗುತ್ತದೆ. ಇದು ಒಳ್ಳೆಯ ಸಂಪ್ರದಾಯವಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ನಾವು ಅನೇಕ ಬಾರಿ ಹನ್ನೊಂದು ಗಂಟೆಗೆ ಬಂದು ಭಾಗವಹಿಸುತ್ತೇವೆ, ಅದರೆ ಕೆಲವರು ಮುಂದೆ ಕುಳಿತಿರುವವರು, ಮುಂದೆ ಕುಳಿತಿರೋರು ಎಂದು ಏನು ಹೇಳುತ್ತಾರೆ ಅದು ಸರಿ ಇಲ್ಲ, ನಾನು ಬಹಿರಂಗವಾಗಿ ತಮಗೆ ಹೇಳುತ್ತೇನೆ ಆ ಕೊನೆಯ ಸೀಟನ್ನು ನನಗೆ ಕೊಟ್ಟರೆ ನಾನು ಹೋಗುತ್ತೇನೆ. ಮುಂದೆ ಕುಳಿತರೆ ಕಿರೀಟ ಏನೂ ಇಲ್ಲ. ನೀವು ಕೊಡುವುದಾದರೆ ಈ ತಕ್ಷಣ ನಾನು ಅಲ್ಲಿ ಹೋಗಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ರಮೇಶ್ ಸಿ.ಜಿಗಜೀಣಗಿ:- ನಿದ್ದೆ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಕಂದಾಯ ಸಚಿವರು ನಿದ್ದೆ ಮಾಡಬಹುದು ಎಂದು ಹೇಳುತ್ತಾರೆ. ನನ್ನ ಜನುಮದಲ್ಲಿ ಶಾಸನಸಭೆಯನ್ನು ಬಹಳ ಪಾವಿತ್ರ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಜಾಪ್ರಭುತ್ವಕ್ಕೆ ಇದೊಂದು ದೇಗುಲ ಎಂದು ತಿಳಿದುಕೊಂಡಿದ್ದೇನೆ. ★★ ನಾವು ಎಂದೂ ಆ ರೀತಿ ಮಾಡಿಲ್ಲ.

ಶ್ರೀ ಹೆಚ್.ಶಿವಪ್ಪ:- ಎಲ್ಲೊ ತಿಂದು ಬಂದು ಎಂದು ಏನು ಹೇಳಿದ್ದಾರೆ ಅದನ್ನು ದಯವಿಟ್ಟು ಕಡತದಿಂದ ತೆಗೆದು ಹಾಕಿಸಬೇಕು. ಅದು ಸಂಪ್ರದಾಯದ ಪದ ಅಲ್ಲ.

ಅಧ್ಯಕರು:- ಆಯಿತು.

ಶ್ರೀ ವಾಟಾಳ್ ನಾಗರಾಜ್:- ಎಲ್ಲೊ ತಿಂದು ಬಂದು ಎಂದರೆ ಎಲ್ಲೋ ಹೋಟೆಲ್‌ನಲ್ಲೋ ಮನೆಯಲ್ಲೋ ಊಟ ಮಾಡಿಕೊಂಡು ಬಂದು ಎಂದು ಅರ್ಥ.

SRI H.SIVAPPA:- That is not parliamentary that should be expunged that is not the way to be represented.

(INTERRUPTIONS)

ಅಧ್ಯಕ್ಷರು:- ಶಿವಪ್ಪನವರೇ ನಾನು ಸರಿ ಮಾಡತ್ತೇನೆ. ನಾನು ಅನೇಕ ಸಂದರ್ಭಗಳಲ್ಲಿ ಶಕ್ತಿ ಮೀರಿ ಇಲ್ಲಿ ಸತ್ ಸಂಪ್ರದಾಯಗಳನ್ನು ಪಾಲಿಸಿಕೊಂಡು ಹೋಗಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಎಲ್ಲಾ ವಲಯಗಳಿಂದ ಸಹಕಾರ ಸಿಗದ ಹೊರತು, ಎಲ್ಲಾ ರಾಜಕೀಯ ಮುಖಂಡರುಗಳಿಂದ, ಎಲ್ಲಾ ಶಾಸಕರಿಂದ ಸಹಕಾರ ಸಿಗದ ಹೊರತು ನಾನು ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನನಗೆ ಹೆಮ್ಮೆಯಾಗುತ್ತದೆ, ಇವೊತ್ತಿನ ಪರಿಸ್ಥಿತಿನಲ್ಲಿ, ಪ್ರಸ್ತುತ ರಾಜಕಾರಣದೊಳಗೆ ನಮ್ಮ ವಿಧಾನ ಸಭೆಯ ಕಾರ್ಯಕಲಾಪಗಳು ರಾಷ್ಟ್ರಮಟ್ಟದಲ್ಲಿ ಬಹಳ ಉತ್ತಮ ಮಟ್ಟದಲ್ಲಿ ನಡೆದುಕೊಂಡು ಹೋಗುತ್ತಿವೆ. ಇದನ್ನು ಇನ್ನೂ ಹೆಚ್ಚು ಉತ್ತಮ ಮಟ್ಟಕ್ಕೆ ತೆಗೆದುಕೊಂಡು

★★ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಹೋಗಬೇಕೆಂದು ನನ್ನ ಅಭಿಲಾಷೆ. ಆದಕಾರಣ ತಮ್ಮೆಲ್ಲರಿಂದ ಸಹಕಾರ ಬಯಸುತ್ತೇನೆ. ಈಗ ಮಾನ್ಯ ವಿರೊಧ ಪಕ್ಷದ ನಾಯಕರು.....

ಶ್ರೀ ಶಿವನಂಜಪ್ಪ:- ಅಧ್ಯಕ್ಷರೇ ನನಗೆ ಮಾತನಾಡಲು ಇವೊತ್ತೇ ಅವಕಾಶ ಕೊಡುತ್ತೀರೋ?

ಅಧ್ಯಕ್ಷರು:- ನೋಡೋಣ, ಪಸ್ಟ್ ಇದನ್ನು ಡಿಸೈಡ್ ಮಾಡಿದ್ದೇವೆ, ನಿನ್ನೆಯೇ ಇದನ್ನು ಡಿಸೈಡ್ ಮಾಡಿಬಿಟ್ಟಿದ್ದೇವೆ.

ಶ್ರೀ ಹೆಚ್.ಶಿವನಂಜಪ್ಪ:- ನಾನು 8 ದಿವಸಗಳಿಂದಲೂ ಕಾಯುತ್ತಿದ್ದೇನೆ. ಅಲ್ಲಿ ಸಾವಿರಾರು ಜನ ರೈತರು ಬಹಳ ಗಲಾಟೆ ಮಾಡುತ್ತಿದ್ದರೆ.

ಅಧ್ಯಕ್ಷರು:- ಹೌದು, ಆ ಬಗ್ಗೆ ತಾವು ಹೇಳಿದ್ದೀರಿ ಇನ್ನೂ ಅನೇಕ ಸದಸ್ಯರುಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಕೆಲವು ಬೆಳವಣಿಗೆಗಳಿಂದಾಗಿ ನಿನ್ನೆ ನಾನು, ತಾವು ಈಗ ಕಾಂಗ್ರೆಸ್ ಪಕ್ಷದ ಸಹ ಸದಸ್ಯರಲ್ಲವೇ, ತಮ್ಮ ನಾಯಕರು ನಿನ್ನೆ ಚರ್ಚೆಗೆ ಬಂದಿದ್ದರು, ತಾವು ಆಮೇಲೆ ನನ್ನ ಕೊಠಡಿಯಲ್ಲಿ ಬಂದು ಮೀಟ್ ಮಾಡಿ, ನಾನು ವ್ಯವಸ್ಥೆ ಮಾಡಿಕೊಡುತ್ತೇನೆ. ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ ವಾಗ್ಳರವರು ಪ್ರಸ್ತಾಪ ಮಾಡಿರುವುದರಿಂದ ನಾನು ಅಲ್ಲಿಂದ ಪ್ರಾರಂಭ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಈಗ ನಾವು ಈ ರೀತಿ ಮಾಡಿಕೊಳ್ಳೋಣ, ಇದು ೬ ಗಂಟೆಗ ಶೂನ್ಯ ವೇಳೆಯ ಚರ್ಚೆ ಈಗ 1-20 ವೇಳೆಯಾಗಿದೆ. ಆದುದರಿಂದ 2 ಗಂಟೆಯೊಳಗಾಗಿ ನೀವು ಮತ್ತು ಕಾಂಗ್ರೆಸ್ ಪಕ್ಷದ ನಾಯಕರು.....

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು 5 ನಿಮಿಷದ ಮೇಲೆ ಮಾತನಾಡುವುದಿಲ್ಲ.

ಅಧ್ಯಕ್ಷರು:- ಎಂಟತ್ತು ನಿಮಿಷಗಳೇ ಆಗಲಿ, ತೊಂದರೆ ಏನೂ ಇಲ್ಲ, ತಮಗೆ ನಾನು ಟೈಮ್‌ನ್ನು ನಿಗಧಿ ಮಾಡುವುದಿಲ್ಲ, ನಾನು ಏನು ವಿನಂತಿಯನ್ನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆಂದರೆ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇದಕ್ಕೆ ಕಾನೂನಿನ ತೊಡಕು ಬರಬಾರದು ಎಂದೇ ನಾನು ಅಡ್ಜರ್ನ್‌ಮೆಂಟ್ ಮೋಶನ್ ಕಳುಹಿಸಿದ್ದು. ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ ಎಂದು ತಾವು ಹೇಳಿದಿರಿ.

ಅಧ್ಯಕ್ಷರು:- ಶೂನ್ಯ ವೇಳೆಯಲ್ಲಿಯೇ ತೆಗೆದುಕೊಳ್ಳೋಣ. ನಾನು ಏನು ತಮ್ಮಲ್ಲಿ ವಿನಂತಿ ಮಾಡುತ್ತೇನೆಂದರೆ 2-00 ಗಂಟೆಗೆ ಇದನ್ನು ಮುಕ್ತಾಯ ಮಾಡಿಬಿಡೋಣ. 2-00 ಗಂಟೆಗೆ ನಾವು ಊಟಕ್ಕೆ ಅಡ್ಜೆರ್ನ್ ಮಾಡಿದರೆ ಮತ್ತೆ 3-00 ಗಂಟೆಗೆ ಸೇರಿ ನಿಯಮ 69ರ ಮೇಲೆ ತಾವು ಕೊಟ್ಟಿರತಕ್ಕಂಥದ್ದರ ಬಗ್ಗೆ ಚರ್ಚೆಗೆ ತೆಗೆದೆಕೊಳ್ಳೋಣ ಆ

ಮೇಲೆ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಲ್ಲೋ ಒಂದು ಕಡೆ ನನಗನ್ನಿಸಿರುವಂತೆ ಹೊಸದಾಗಿ ಆಯ್ಕೆಯಾಗಿ ಬಂದಂಥ ಅನೇಕ ಸದಸ್ಯರುಗಳಿಗೆ ಯಾವಾಗಲೂ ಮೊದಲಿನ ಸಾಲಿನಲ್ಲಿರುವವರೇ ಚರ್ಚೆಗೆ ಹೆಚ್ಚು ಅವಕಾಶವನ್ನು ತೆಗೆದುಕೊಂಡುಬಿಡುತ್ತಾರೆ ಎನ್ನುವ ಭಾವನೆ ನಮ್ಮ ಪಕ್ಷದ ಸದಸ್ಯರಿಗೆ ಮತ್ತು ಬೇರೆ ಸದಸ್ಯರಿಗೂ ಬಂದಿದೆ. ಅದಕ್ಕಾಗಿಯೇ ಬಹುಶಃ ಒಂದು ಹೊಸ ಪದ್ಧತಿಯೆಂದು ಆದರೂ ಪರವಾಗಿಲ್ಲ ವಿರೋಧ ಪಕ್ಷದ ನಾಯಕರು ಡಿಮ್ಯಾಂಡ್ ಮೇಲೆ ಚರ್ಚೆ ಪ್ರಾರಂಭ ಮಾಡಲಿಲ್ಲವೆಂದು ಹೇಳುವ ಒಂದು ಅಪವಾದಕ್ಕೆ ಗುರಿಯಾದರೂ ಪರವಾಗಿಲ್ಲವೆಂದೇ ತಿಳಿದು ನಾನು ನಿನ್ನೆ ಯೋಗಿಶ್ ಭಟ್ ರವರಿಂದ ಆ ಡಿಮ್ಯಾಂಡ್ ಬಗ್ಗೆ ಪ್ರಸ್ತಾಪ ಮಾಡಿಸಿದೆ. ಆದರೆ ಪತ್ರಿಕೆಯಲ್ಲಿ ಇವತ್ತು ಬಂದಿಲ್ಲ, ಬಹುಶಃ ನಾಳೆ ಬರಬಹುದು ಎಂದು ಕಾಣುತ್ತೆ, ಬಹಳಷ್ಟು ಉತ್ತಮ ವಿಷಯಗಳು ಅವರ ಭಾಷಣದಲ್ಲಿ ಇತ್ತು. ನಾನು ಇಷ್ಟೇ ಹೇಳುತ್ತೇನೆ, ಈ ಎಲ್ಲಾ ಡಿಮ್ಯಾಂಡ್‌ಗಳ ಮೇಲೆ ಹಿಂಭಾಗದಲ್ಲಿ ಕುಳಿತಿರುವಂಥ ಮಾನ್ಯ ಸದಸ್ಯರುಗಳೇ ಹೆಚ್ಚು ಮಾತನಾಡಲಿ, ಏಕೆಂದರೆ ಅವರು ಹೆಚ್ಚಾಗಿ ಕಲಿತುಕೊಳ್ಳುವ ನಿಟ್ಟಿನಲ್ಲಿ ಅವಕಾಶವಾಗುತ್ತದೆ, ಈ ನಿಟ್ಟಿನಲ್ಲಿ ಕೆಲವು ಕೊರತೆಗಳಾದರೂ ಪರವಾಗಿಲ್ಲವೆಂದು ಹೇಳಿಯೇ ನಮ್ಮ ಪಾರ್ಟಿಯಲ್ಲಿ ತೀರ್ಮಾನ ತೆಗೆದುಕೊಂಡು ಹಿಂದೆ ಕುಳಿತಿರುವಂಥ ಸದಸ್ಯರುಗಳೇ ಹೆಚ್ಚು ಮಾತನಾಡಲಿ ಎಂದು ಹೇಳಲಾಗಿದೆ. ಇದರಲ್ಲಿ ಕೆಲವು ಕೊರತೆಗಳು ಆಗಬಹುದು, ನಿರೀಕ್ಷೆಯಂತೆ ಆಗದೇ ಇದ್ದರೂ ಸಹ ಉಳಿದ ಸಂದರ್ಭದಲ್ಲಿ ಉಪಯೋಗ ಮಾಡಿಕೊಳ್ಳೋಣವೆಂದು ಹೇಳಿ ನಾನು ಆ ರೀತಿ ಹೇಳಿದ್ದೇನೆ.

ಅಧ್ಯಕ್ಷರು:- ತರಬೇತಿ ತೆಗೆದುಕೊಂಡ ಹಾಗೆ ಆಗುತ್ತದೆ ಬಿಡಿ, ನಿಮ್ಮ ಸಲಹೆ ಬಹಳ ಉತ್ತಮವಾಗಿದೆ. ಅವರು ಮಾತನಾಡುವಾಗ ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ಸರಿ ಮಾಡೋಣ ಬಿಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- (ಅ) ಜುರಾಲ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಚರ್ಚೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಮುಖವಾದಂಥ ಈ ಜುರಾಲಾ ಅಣೆಕಟ್ಟು ಇವೊತ್ತು ಎತ್ತರ ಮಾಡಿರುವಂಥದ್ದರ ಬಗ್ಗೆ ಬಹುಶಃ ಮೊದಲ ಬಾರಿಗೆ ದಿನಾಂಕ 15-06-1995ಕ್ಕೆ ನಾನು ಸ್ಥಳಕ್ಕೆ ಅಧಿಕಾರಿಗಳ ಜೊತೆ ಭೇಟಿ ಕೊಟ್ಟಿದ್ದೆ. ಆ ಸಂದರ್ಭದಲ್ಲಿ 1978ರ ಬಚಾವತ್ ಆಯೋಗದ ಒಪ್ಪಂದದ ಪ್ರಕಾರ 17.84 ಟಿ.ಎಂ.ಸಿ.ಗಿಂತ ಹೆಚ್ಚು ನೀರನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶವಿಲ್ಲ. ಆಂಧ್ರಪ್ರದೇಶ ಸರ್ಕಾರ ಕೃಷ್ಣಾ ನದಿಗೆ ನಿರ್ಮಿಸುತ್ತಿರುವ ಜುರಾಲಾ ಅಣೆಕಟ್ಟು 318.576 ಮೀಟರ್ ಮಾತ್ರ ಇರಬೇಕು. ಈಗ ಅದು 321.510